೨ನೇ ಯೋಚನೆ.—ಬೇರೆ ಪಾರ್ಶ್ವದಲ್ಲಿ ಜೇಸುನಾಥಸ್ವಾಮಿ ಅತಿ ಜಾಜ್ವಲ್ಯವಾದಂಥ ಭದ್ರಾಸನದ ಮೇಲೆ ಕುಳಿತುಕೊಂಡು, ಮಂದಹಾಸ ಮಹಿಮೆ ಶಾಂತ ಮರ್ಯಾದೆ ಸೌಂದರ್ಯ ಮುಖವಿಲಾಸದೊಂದಿಗೆ ಸತ್ಯ ಡಾಲು ಎತ್ತಿಕೊಂಡು, ತಮ್ಮ ಬೆಂಬಳಿಯಾಗಿ ಮನುಷ್ಯರೆಲ್ಲರನ್ನು ಈ ಅಮೃತವಾದ ವಾಕ್ಯಗಳಿಂದ ಕರೆಯುತ್ತಾರೆಂತ ನೆನಸಿರೋ: ಪಿಶಾಚಿಯ ದಾಸತ್ವದಲ್ಲಿ ಪೀಡೆ ಪಟ್ಟು, ಆಯಾಸಗೊಂಡವರುಗಳಿರಾ, ನಮ್ಮ ಬಳಿಗೆ ಬನ್ನಿ, ನಿಮ್ಮನ್ನು ಕಾಪಾಡಿ ರಕ್ಷಿಸುವೆವು. ನಮ್ಮನ್ನು ನೋಡಿ ತಾಳ್ಮೆ ಸಾಧುತ್ವವ ಕಲಿತುಕೊಳ್ಳಿರಿ; ನಮ್ಮ ನೊಗವು ಮೃದುವೂ ಹೊರೆಪು ಬಳುವಿಲ್ಲದೆಯೂ ಆಗಿರುತ್ತೆ. ಪಿಶಾಚಿಗಳ ರಾಜಾಜ್ಞೆಯುಪದ್ರಗಳ ಪರಿಹರಿಸುವದಕ್ಕಾಗಿ ಚಿತ್ತೈಸಿದೆವು. ಪಿಶಾಚಿಗೆ ಪ್ರತಿ ವಿಧಾನವಾಗಿ ತತ್ವ ಜ್ಞಾನ ಡಾಲು ಎತ್ತಿ, ಯೋಗ ಮಾರ್ಗಕ್ಕೆ ಕರೆಯುತ್ತೇವೆ. ಪಿತನಾದ ಸರ್ವೇಶ್ವರನ ಶತ್ರುಗಳೆಂಬ ಪಿಶಾಚಿಗಳೊಂದಿಗೆ ಜಗಳವಾಡಿ ಜಯಿಸಿ ಮೋಕ್ಷವ ಹೊಂದುವಂತೆ, ಇಗೋ ಸನ್ಯಾಸಿಗಳು ಈ ದಿವ್ಯ ಬೋಧನೆ ಅನುಸರಿಸಿ, ಕಾರ್ಯ ಸಿದ್ಧಿಯಾಗಿ ಲೋಕದ ಸುಖ ಭಾಗ್ಯ ಬಹುಮಾನಗಳ ಪರಿತ್ಯಜಿಸುತ್ತಾರೆ. ಮಿಕ್ಕ ಕ್ರೀಸ್ತು

ವರಾದರೆ, ಕ್ರಿಯೆ ಸಿದ್ಧಿಯಿಂದ ಬಿಡದೆ ಇದ್ದಾಗ್ಯೂ, ಅವುಗಳಲ್ಲಿ ಮನಸ್ಸಿಡದೆಯೂ ನಂಬದೆಯೂ, ಪಾಪ ಮಾಡುವದಕ್ಕಿಂತ ಎಲ್ಲ ನಿಜವಾಗಿ ಬಿಟ್ಟುಬಿಡುವದಕ್ಕೆ ಸನ್ನಾರು ಪಡ ಬೇಕಾಗಿರುತ್ತೆ. ಅದರಿಂದ ಅರ್ಚ್ಯ. ಚಿನ್ನಪ್ಪನವರು ಪಾಲಿಸಿದ್ದೇನಂದರೆ: ಸತಿಯುಳ್ಳವನು ಸತಿ ಇಲ್ಲದವನ ಹಾಗೂ, ಅಳುವವರು ಅಳದವರ ಹಾಗೂ, ಸುಖದೊಳಗಿರುವಂಥವರು ಅನುಭವಿಸದೆ ಇದ್ದ ಹಾಗೂ, ಕೊಳ್ಳುವಂಥವರು ಸಂಪಾದಿಸದೆ ಇದ್ದ ಹಾಗೂ, ಲೋಕದಲ್ಲಿ ವರ್ತಿಸುವವರು ವರ್ತಿಸದೆ ಇದ್ದ ಹಾಗೂ ಇರಲಿ. ಲೌಕೀಕ ಭಾಗ್ಯ ಸುಖ ಬರುಮಾನಗಳೆಲ್ಲ ಒಂದೇ ಪಾಪದಿಂದ ಸಂಪಾದಿಸ ದಾರಿಯಾದರೆ, ಇವೆಲ್ಲ ವರ್ಜಿಸುವಿಯೋ, ಪಾಪದಿಂದ ಸಂಪಾದಿಸುವಿಯೋ? ಆದರೆ ಪಾಪವ ಮಾಡದ ಹಾಗೆ ಪ್ರಪಂಚವಾದ್ಯಂತ ಬಿಟ್ಟು ಬಿಡ ಬೇಕಾಗಿದ್ದಲ್ಲಿ ಬಿಟ್ಟು ಬಿಡದಿದ್ದರೆ, ಪಿಶಾಚಿಯ ನಿಶಾನೀ ಕೆಳಗೆ ಹೋಗುತ್ತೀಯೋ ಹೊರ್ತು, ಜೇಸುನಾಥಸ್ವಾಮಿಯ ಪಾರ್ಶ್ವದಲ್ಲಿ ಇರಲಾರಿ. ಪಾಪಕ್ಕಿಂತ ದರಿದ್ರಕ್ಕೂ ಅಪಕೀರ್ತಿಗೂ ಕಲಾಪಕ್ಕೂ ಕಷ್ಟಕ್ಕೂ ಅಂಜಿಕೊಂಡರೆ ನೀನು ನಿಜ ಕ್ರೀಸ್ತುವನಲ್ಲವು. ನಿಜವಾದ ಕ್ರೀಸ್ತುವರು ಜೇಸುನಾಥಸ್ವಾಮಿಯ ಪ್ರೋಕ್ತ ಕೇಳಿ ಬೆಂಬಳಿಯಾಗಿ ಬರುತ್ತಾರೆ; ನೀನೋ, ಸ್ವಾಮಿಯ ದಿವ್ಯ ವಾಕ್ಯವನ್ನು ಕೇಳುತ್ತೀಯೋ? ಸತ್ಯೋಪದೇಶಕ್ಕೆ ಸಂಕೋಚ ಪಡುವದಿಲ್ಲವೋ? ಸ್ವಾಮಿಯ ಪಾರ್ಶ್ವದಲ್ಲಿ ಇರುವದಕ್ಕೆ ನಿನಗೆ ಭಯವಿಲ್ಲವೋ? ಜ್ಞಾನಸ್ನಾನ ತೆಗೆಯುವಾಗ ಕೊಟ್ಟ ಮಾತಿನ ಮೇರೆಗೆ ನಡೆಯುತ್ತೀಯೋ? ಸ್ವಾಮಿಯ ನಿಜವಾದ ಶಿಷ್ಯನಾಗಿರುವಿ ಆಗಲಿ.

ಜೇಸುನಾಥರೇ, ನಿಮ್ಮನ್ನು ನಾನು ಬಿಟ್ಟು ಬಿಟ್ಟದ್ದರಿಂದ ಮಹಾ ದುಃಖವಾಗಿದ್ಧೇನೆ, ಮಹಾ ಮನಸ್ತಾಪವಾಗಿದ್ಧೇನೆ. ಸ್ವಾಮೀ, ಇನ್ನು ಮೇಲೆ ದೇವರವರ ಶಿಷ್ಯನಹಾಗೆ ನಡೆಯುವೆನೆಂತ ಘಟ್ಟಿ ಪ್ರತಿಜ್ಞೆ ಮಾಡುತ್ತೇನೆ. ಆದರೆ ಲೋಕ ಪಿಶಾಚಿ ನನ್ನ ಪಂಚೇಂದ್ರಿಯಗಳನ್ನು ಜಯಿಸುವದಕ್ಕೆ ನನಗೆ ಧೈರ್ಯ ಸಾಲದ್ದರಿಂದ, ದೇವರವರು ನನಗೆ ದಯಪಾಲಿಸಿದ ಸುವಿಚಾರ ಸುಬುದ್ಧಿಯನ್ನು ಸಲ್ಲಿಸಿ ನೆರವೇರಿಸುವಹಾಗೆ ನನಗೆ ದಯಮಾಡ ಕರುಣಿಸಿರಿ.

೨ನೇ ಧ್ಯಾನವು.

ಪರರ ಮೇಲೆ ಸ್ನೇಹವು.

೧ನೇ ಆಯುತ್ತವು. ನಮ್ಮ ಕರ್ತರು ತಮ್ಮ ನಡತೆಯಿಂದಲೂ ವಾಕ್ಯದಿಂದಲೂ ಕಲಿಸಿದ ದಿವ್ಯ ಬೋಧನೆಯನ್ನು ಕೇಳಿದಂತೆ ನೆನಸುವದು.

೨ನೇ ಆಯುತ್ತವು. ಈ ಕಲ್ಪಣೇ ಮೇರೆಗೆ ನಡೆಯುವದಕ್ಕೆ ಸರ್ವೇಶ್ವರನ ಅನುಗ್ರಹ ಕೇಳುವದು.

೧ನೇ ಯೋಚನೆ.—೧ನೇದು. ಜೇಸುನಾಥಸ್ವಾಮಿ ಪರರ ಮೇಲೆ ಪ್ರಿಯವನ್ನು ಕಟ್ಟಳೆ ಮಾಡಿದರು. ತಾವು ವಿಶೇಷವಾಗಿ ಕಲ್ಪಿಸಿದ ಕಟ್ಟಳೆ ಏನಂದರೆ: ನೀವು ಸ್ನೇಹವಾಗಿಯೂ ಅನ್ಯೋನ್ಯವಾಗಿಯೂ ಇರಿಯೆಂತ ನಾವೇ ನಿಯಮಿಸುತ್ತೇವೆ. ಈ ಕಲ್ಪಣೆ ಎರಡನೇ ಕಲ್ಪಣೆ, ಆದರೆ ಮೊದಲನೇ ಕಲ್ಪಣೆಗೆ ಸರಿಸಮವಾಗಿಧೆ. ಇದು ನೂತನ

ಕಲ್ಪಣೆ ಸರಿ. ನಿಮ್ಮೊಳಗೆ ಸ್ನೇಹ ಬಂಧನೆಯಾಗಿದ್ದರೆ, ನೀವು ನಮ್ಮ ಶಿಷ್ಯರೆಂದು ದೃಷ್ಟಾಂತವಾಗುವದು. ಈ ಕ್ರಮವಾಗಿ ನಮ್ಮ ಕರ್ತರಾದ ಜೇಸುನಾಥಸ್ವಾಮಿಯು ಪರರ ಮೇಲೆ ಸ್ನೇಹವೆಂಬ ಕಲ್ಪಣೆಯನ್ನು ವಾಕ್ಯದಿಂದ ಸ್ಥಾಪಿಸಿದ್ದಲ್ಲದೆ, ತಾವೇ ಮಾತೃಕೆಯಾಗಿ, ತಮ್ಮ ನಡತೆಯಿಂದ ಸಹಾ ಪಾಲಿಸಿದರು. ನಾವು ನಮ್ಮೊಳಗೆ ಯಾವ ಪ್ರಕಾರ ಸ್ನೇಹವಾಗಿರ ಬೇಕೆಂತ ಕೇಳಿದರೆ ಜೇಸುನಾಥ ಸ್ವಾಮಿಯನ್ನು ವಿಚಾರಿಸಿ ನೋಡಿರಿ. ನರಮಕ್ಕಳು ಹ್ಯಾಗೆ ಸ್ನೇಹಿತರಿಗೋಸ್ಕರವಾಗಿ ಪ್ರಾಣವ ಕೊಡುತ್ತಾರೋ, ಹಾಗೆ ಜೇಸುನಾಥರು ಶತ್ರುಗಳಿಗಾಗಿಯೂ ನಿಷ್ಠುರರಿಗಾಗಿಯೂ ತಮ್ಮನ್ನು ಹತ ಮಾಡಿದವರಿಗಾಗಿಯೂ ಜೀವವ ಧಾರೆಯೆರೆಯುತ್ತಾರೆ. ನಾವು ಪಾಪಾತ್ಮರಾಗಿರುವ ಸಮಯದಲ್ಲಿ ಜೇಸು ಕ್ರೀಸ್ತು ನಮಗೋಸ್ಕರ ಮರಣ ಹೊಂದಿದರೆಂತ ಸತ್ಯವೇದ ವಾಕ್ಯವಾಗಿದೆ. ಮತ್ತು ಜೇಸುನಾಥಸ್ವಾಮಿಯ ಮೇಲೆ ಭಕ್ತಿಯಾಗಿರ ಬೇಕಾದರೆ, ನಮ್ಮೊಳಗೆ ಸ್ನೇಹವಾಗಿ ನಡೆಯ ಬೇಕು. ಸ್ವಾಮಿ ನಮಗೆ ಲೆಖ್ಖವಿಲ್ಲದ ಉಪಕಾರಗಳನ್ನು ಮಾಡಿದರಲ್ಲಾ: ಪ್ರತಿ ಉಪಕಾರವ ಕೊಡ ಬೇಕಾದರೆ ನಮ್ಮೊಳಗೆ ಸ್ನೇಹವಾಗಿರ ಬೇಕು. ಜೇಸುನಾಥಸ್ವಾಮಿ ನಮಗಾಗಿ ಪಟ್ಟ ಪ್ರಯಾಸವು, ದಯಪಾಲಿಸಿದ ದೇವ ಪ್ರಸಾದವು, ಈ ಮೊದಲಾದ ಉಪಕಾರಗಳಿಗಾಗಿ ಬದಲು ಕೇಳಿದರೆ, ನಾವು ಏನು ಕೊಟ್ಟಾಗ್ಯೂ ಸಾಕಾಗುವದೋ? ಸರಿಯಾಗುವದೋ? ಆದರೆ ಸ್ವಾಮಿಗೆ ಯಾವದಕ್ಕಾದರೂ ಅಕ್ಕರೆಯಿಲ್ಲವು. ಅಗತ್ಯವಿಲ್ಲದ್ದರಿಂದ ನಾವವರಿಗೆ ಸಾಲವಾಗಿ ಬಿದ್ದಂಥ ಋಣವ ಪರರಿಗೆ ಹವಾಲ್ತೆ ಮಾಡಿದರು. ಆದದರಿಂದ ಮನು

ಷ್ಯರಿಗೆ ಮಾಡಿದ್ದೆಲ್ಲ ತಮಗೆ ಮಾಡಿದಂತೆ ನೋಡುವರು. ತಮ್ಮ ಶಿಷ್ಯರಿಗೆ ಮಾಡಿದಂಥ ಅಪಮಾನ ಅಪಕೀರ್ತಿ ತಮಗೆ ಮಾಡಿದ ಹಾಗೆ ನೋಡುವರು. ನ್ಯಾಯ ನಿರ್ಣಯ ಮಾಡುವ ದಿನದಲ್ಲಿ ಪಾಪಾತ್ಮರನ್ನು ನರಕದಲ್ಲಿ ತಳ್ಳುವಾಗಲೂ ಪುಣ್ಯಾತ್ಮರಿಗೆ ಮಿತಿಯಿಲ್ಲದ ಮೋಕ್ಷದ ಭಾಗ್ಯ ಕೊಡುವಾಗಲೂ, ತಮಗೆ ಅನುಕೂಲವಾಗಿ ಮಾಡಿದ್ದೆಲ್ಲ ಮರೆತಂತೆ, ತಮ್ಮ ಶಿಷ್ಯರಿಗೆ ಉಪಕಾರ ಮಾಡದೆಯಿದ್ದಕಾರಣ ನರಕದೊಳು ತಳ್ಳುವರು, ಮಾಡಿದ ಉಪಕಾರಗಳ ನಿಮಿತ್ತ ಮೋಕ್ಷಕ್ಕೆ ಕರೆಯುವರು.

ಈ ಪುಣ್ಯಾಚಾರವನ್ನು ನಮ್ಮ ಕರ್ತರಾದ ಜೇಸುನಾಥಸ್ವಾಮಿ ಬೇಕಾದಷ್ಟು ನ್ಯಾಯಗಳಿಂದ ಮೆಪ್ಪಿಸುತ್ತಾರೆ. ಯಾವವಂದರೆ, ನಿನ್ನಂತೆ ದಿವ್ಯ ರಕ್ತದಿಂದ ಬಿಡಿಸಲ್ಪಟ್ಟ ಮನುಷ್ಯನನ್ನು ಸ್ನೇಹಿಸುವದು ನ್ಯಾಯವಲ್ಲವೇ? ನಿನ್ನಂತೆ ಸ್ವಾಮಿಗೆ ತಿರು ಸಭೆಯೊಳು ಜ್ಞಾನಸ್ನಾನದಿಂದ ಹುಟ್ಟಿದ ಪುತ್ರನ ಮೇಲೆ ಪಕ್ಷವಾಗಿರುವದು ಕ್ರಮವಲ್ಲವೇ? ನೀನು ಅನುಭವಿಸುವ ದೇವ ದ್ರವ್ಯ ಅನುಮಾನಗಳನ್ನು ಅವನು ಅನುಭವಿಸುತ್ತಾನಲ್ಲ? ನೀನು ಸ್ವೀಕರಿಸುವಂಥ ದಿವ್ಯ ಸತ್ ಪ್ರಸಾದವ ಆವನು ಸ್ವೀಕರಿಸುತ್ತಾನಲ್ಲ? ನೀನು ಕೋರಿಕೊಳ್ಳುವ ಮೋಕ್ಷವನ್ನು ಅವನು ಸಹ ಕೋರುತ್ತಾನೆ; ಆ ಮೋಕ್ಷವನ್ನು ಎಲ್ಲರೂ ಹೊಂದಿದರೆ ಯಾವಾಗ್ಯೂ ಸ್ನೇಹವಾಗಿರುವದು ನ್ಯಾಯವಲ್ಲವೇ? ಆದದರಿಂದ ಈ ಸ್ನೇಹವು ಈಗಲಿಂದ ಪ್ರಾರಂಭಿಸ ಬೇಕು. ಈ ಕಲ್ಪಣೆ ಮಾತ್ರ ಸಿದ್ಧಿಸಿದರೆ, ಮನುಷ್ಯರೆಲ್ಲರು ಏಕೀಭವಿಸಿ ಒಂದೇ ಮನಸ್ಸಿನಿಂದ ನಿಜ ಸ್ನೇಹಿತರಾಗಿ ಒಬ್ಬೊಬ್ಬನು

ಮತ್ತೊಬ್ಬರ ಶುಭವ ತನಗೆ ಕೋರಿದ ಹಾಗೆ ಕೋರಿದರೆ, ಸ್ಥಿರವಾದ ಸಮಾಧಾನವು ಮೋಕ್ಷದ ಮೇರೆಗಿರುವದು. ಈ ನ್ಯಾಯಗಳಿಂದ ನಮ್ಮ ಹೃದಯವು ಕರಗದಿದ್ದರೆ ಪಾಷಾಣ ಗುಂಡೇ ಸರಿ, ಮನುಷ್ಯನ ಹೃದಯವು ಅಲ್ಲವು. ನಾನು ಈ ಪಟ್ಟಿಗೂ ನನ್ನನ್ನು ಸ್ನೇಹಿಸುವ ಮೇರೆಗೆ ಬೇರೆ ಮನುಷ್ಯರನ್ನು ಸ್ನೇಹಿಸಲಿಲ್ಲವಾದ್ದರಿಂದ, ದೇವರ ಮೇಲೆ ಇರುವ ನನ್ನ ಭಕ್ತಿ ಡಂಭ ಭಕ್ತಿಯೋ ಹೊರತು ನಿಜವಾದ ಭಕ್ತಿ ಅಲ್ಲವು. ದಿವ್ಯ ರಕ್ಷಕರೇ, ನನ್ನ ಕಲ್ಲಿನ ಹೃದಯವ ತೆಗದುಹಾಕಿ, ನನಗೆ ನೂತನ ಮೃದುತರವಾದ ಹೃದಯವನ್ನೂ ಮನುಷ್ಯರ ಮೇಲೆ ದೇವರವರಿಗಾಗಿ ಸ್ನೇಹವುಳ್ಳ ಹೃದಯವನ್ನೂ ಪಾಲಿಸ ಕರುಣಿಸಿರಿ.

೨ನೇ ಯೋಜನೆ: ಜೇಸುನಾಥಸ್ವಾಮಿ ಕಟ್ಟಳೆ ಮಾಡಿದ ಸ್ನೇಹದ ಲಕ್ಷಣವೇನೆಂತ ಧ್ಯಾನಿಸುವದು.— ಮೊದಲನೇ ಲಕ್ಷಣವು: ದೇವರಿಗೋಸ್ಕರವಾಗಿರ ಬೇಕು.—ಪ್ರಕೃತಿ ಸ್ವಭಾವ ಗುಣ ಅನುಕೂಲವೆಂಬ ನಿಮಿತ್ತದಿಂದ ಸ್ನೇಹವಾಗಿರುವದು ಸಾಲದು; ಪ್ರತಿ ಉಪಕಾರಾರ್ಥವಾಗಿಯೂ ಕುಲಾಚಾರಾರ್ಥವಾಗಿಯೂ ಸ್ನೇಹ ಮಾಡಿದರೆ, ಲೌಕೀಕ ಸ್ನೇಹವೇ ಹೊರತು, ದಿವ್ಯವಾದ ಸ್ನೇಹವಲ್ಲವು. ದಿವ್ಯವಾದ ಸ್ನೇಹದಿಂದ ಜೇಸುನಾಥಸ್ವಾಮಿಯನ್ನು ನೋಡಿ ಮನುಷ್ಯರನ್ನು ಸ್ನೇಹಿಸುತ್ತೇವೇ. ಜೇಸುನಾಥಸ್ವಾಮಿಯು ನಮ್ಮನ್ನು ಸ್ನೇಹಿಸಿದಂತೆ ಪರರನ್ನು ಸ್ನೇಹಿಸುತ್ತೇವೆ, ಜೇಸುನಾಥರಿಗಾಗಿ ಸ್ನೇಹಿಸುತ್ತೇವೆ. ಸ್ನೇಹಿಸುವದಕ್ಕೆ ಕಾರಣವು ಪ್ರತಿ ವಿಷಯದಲ್ಲೂ ದೇವರಿದ್ದರೆ, ನಮ್ಮ ಸ್ನೇಹ ದಿವ್ಯವಾಗಿರುವದೆಂದು ಹೇಳ ಬರುದು.

ಇಂಥ ಸ್ನೇಹವು ಸುಲಭವೂ ಉಚಿತವೂ ಫಲಿತವೂ ಆಗಿರುತ್ತೆ.

೨ನೇ ಲಕ್ಷಣವು: ಖಂಡಿತವಾಗಿರ ಬೇಕು.—ಬಾಯ್ಯಿಂದಲೂ ವಾಕ್ಯದಿಂದಲೂ ಸ್ನೇಹಿಸುವದು ಡಂಭ ಸ್ನೇಹವು. ಕಪಟ ತಾಳುವದು, ಲಾಲನೆ ಮಾಡುವದು, ಮೇಲ್ಭಾವನೆ ತೋರುವದು, ಹಿಂಭಾಗದಲ್ಲಿ ದೂಷಿಸುವದು, ಹಿಂತ ಶತೃತ್ವವು ಸರಿ, ಲೌಕೀಕ ಸ್ನೇಹವೇ; ಇವೆಲ್ಲ ಸ್ನೇಹದ ಭ್ರಷ್ಟತ್ವವೆಂಥೇಳ ತಕ್ಕದ್ದು. ಕ್ರೀಸ್ತುವರ ಸ್ನೇಹವು ನಿಜವಾಗಿರ ಬೇಕು. ಅಂತಃಕರುಣವಿಷ್ಟ ಇರಿಸ ಬೇಕು. ತನ್ನನ್ನು ತಾನು ಸ್ನೇಹಿಸುವ ಮೇರೆಗೆ ಸ್ನೇಹಿಸ ಬೇಕು. ಕಡಿಮೆಯಾಗಿ ಸ್ನೇಹಿಸಿದರೆ ಸಾಲದು: ತನ್ನನ್ನು ತಾನು ಸ್ನೇಹಿಸಿದಂತೆ ಸ್ನೇಹಿಸುವದು ಅದೇ ಪ್ರಮಾಣಿಕವು, ಅದೇ ದೇವ ಕಲ್ಪಣೆಯು.

೩ನೇ ಲಕ್ಷಣವು: ಅನ್ಯೋನ್ಯ ಸುದಾರಿಕೆಯುಳ್ಳದ್ದಾಗಿರ ಬೇಕು.—ಪರರೆಲ್ಲರನ್ನು ನಿಜವಾಗಿ ಸ್ನೇಹಿಸುವಂಥ ಕ್ರೀಸ್ತುವನು ಮನುಷ್ಯರಿಗೆ ತನ್ನಿಂದ ಮೋಸ ಬರಲಿಸದೆಯೂ ನಷ್ಟ ಮನಸ್ತಾಪ ಬರಲಿಸದೆಯೂ ಬೇಕಾದಷ್ಟು ವಿಘ್ನಗಳ ವರ್ಜಿಸುವನು. ತನ್ನನ್ನು ನೋಯಿಸಿದಂಥ ಪರ ಮನಸ್ಸನ್ನು ನೋಯಿಸದಂತೆ ಮತ್ಸರ ಬಿಡುವನು. ತನಗೆ ಎದುರಾಗಿ ವಿವಾದಿಸಿದವರೊಂದಿಗೆ ಜಗಳವಾಡದೆ, ಶಾಂತ ವರಿಸುವನು. ಪರರ ಶುಭವು ತನಗೆ ನಷ್ಟವೆಂಥೇಳದೆ, ಮಮಕಾರ ಲೋಭ ಅಸರ್ಯಗಳ ಬಿಟ್ಟು ಬಿಡುವನು. ಪರರ ಅಪಕೀರ್ತಿಯ ಮೇಲೆ ಸಂತೋಷಿಸದೆ, ತನ್ನ ವಿಕಾರ ಬುದ್ಧಿಯನ್ನು ಸಾಕು ಮಾಡುವನು.

ತನ್ನ ಕೈಕೆಳಗಿರುವ ಮನುಷ್ಯರನ್ನು ಅಸಡ್ಡೆ ಮಾಡದೆ, ಮುಖದಾಕ್ಷಿಣ್ಯ ನೋಡದೆ, ಮದಗರ್ವ ಅಣಗಿಸುವನು. ಉಗ್ರ ಕರ್ಮಾದಿಗಳು ತನ್ನ ಚಿತ್ತದೊಳು ತಗಲದೆ, ಮನದೊಳು ಕೋಪದ ವಿಚಾರವ ಠಾಯಿ ಗೊಳ್ಳಿಸದೆಯೂ, ಗುಮಾನು ಪಡದೆಯೂ, ಮನಸ್ತಾಪ ಪಡದೆಯೂ, ದೋಷದ ಮಾತುಗಳಾಡದೆಯೂ, ಸತ್ಯ ಸ್ನೇಹಕ್ಕೆ ವಿಘ್ನಗಳೆಲ್ಲ ವರ್ಜಿಸಿ ಪರಿತ್ಯಜಿಸಿ, ನಿರ್ಮಳ ಉತ್ತಮ ಶಾಂತವನ್ನು ಕೈಕೊಂಡಿರುವನು. ನಮ್ಮ ಕರ್ತರಾದ ಜೇಸುನಾಥಸ್ವಾಮಿ ಬೋಧಿಸಿದ ಸ್ನೇಹದ ಪ್ರಕಾರ ಪರರ ಅಪತ್ತುಗಳೆಲ್ಲ ತೊಲಗಿಸುವದು ಸಾಲದೆ, ತಾನು ತನಗೆ ಕೋರಿದ ಮೇಲುಗಳೆಲ್ಲಾ, ಶರೀರದ ಭಾಗ್ಯಗಳೂ ಆತ್ಮದ ಮೇಲುಗಳೂ ಅವರಿಗೆ ಬರ ಬೇಕೆಂತ ಕೋರುವನು; ತನ್ನಿಂದಲಾದಷ್ಟು ಕೊಡಿಸುವದಕ್ಕೆ ಪ್ರಯಾಸಪಡುವನು; ತನ್ನ ಕೈಯ್ಯಲ್ಲಿಲ್ಲದ್ದು ಪರರಿಗಾಗಿ ಸ್ವಾಮಿಯನ್ನು ಬೇಡಿಕೊಳ್ಳುವನು; ಅವರಿಗೆ ಶುಭವುಂಟಾದಲ್ಲಿ ತನಗೆ ಬಂತೆಂತೆ ಸಂತೋಷ ಪಡುವನು; ಅವರಿಗೆ ದುಖೋಪಶಮನ ಮಾಡುವನು, ಸಹಾಯವಾಗಿರುವನು, ಬುದ್ಧಿ ಮತಿ ಹೇಳುವನು, ಅವರ ಪಾಪಗಳಿಗಾಗಿ ಅಳುವನು. ಇದೆಲ್ಲ ಸ್ವಾರ್ಥ ನೋಡದೆಯೂ, ತನ್ನ ಪ್ರಯೋಜನವ ನೆನಸದೆಯೂ, ಪ್ರತ್ಯುಪಕಾರಕ್ಕಾಗಿ ಸ್ವಾಮಿಯನ್ನು ಮಾತ್ರ ಉದ್ದೇಶಿಸಿ ಆತ್ಮಗಳ ರಕ್ಷಿಸುವದಕ್ಕೆ ಬೇಕಾದಾಗಲೇ, ತನ್ನ ಭಾಗ್ಯ ಸುಖ ಬರುಮಾನ ಪ್ರಾಣ ಸಹ ಜೇಸುನಾಥಸ್ವಾಮಿ ಕೊಟ್ಟ ಮೇರಿಗೆ ಅತಿ ಕಾಂಕ್ಷೆಯೊಂದಿಗೆ ಕೊಡುವನು. ಇದೇ ಕ್ರೀಸ್ತುವರ ಸ್ನೇಹವು. ಜೇಸುನಾಥಸ್ವಾಮಿ ತಾವೇ ದಾರಿ ತೋರಿಸಿ ಕರೆ

ಯುತ್ತಾರಲ್ಲ? ಹಾಗೆ ನಡೆಯುದವನು ಒಬ್ಬನಾದರೂ ಉಂಟೋ? ಈ ಪರಿಪಿಗೂ ನಡೆದಿಯೋ, ಇಲ್ಲವೋ, ಎಂದು ಶೋಧಿಸಿ, ಮನೋ ನಿರ್ಧಾರ ಮಾಡಿ, ಸ್ವಾಮಿಯು ಅನುಗ್ರಹವನ್ನು ಕೇಳುವದು.

೩ನೇ ಧ್ಯಾನವು.

ನಮ್ಮ ಕರ್ತರಾದ ಜೇಸುನಾಥಸ್ವಾಮಿ ಪರ್ವತದ ಮೇಲೆ ಬೋಧಿಸಿದ ಅಷ್ಟ ಭಾಗ್ಯಗಳು.

೧ನೇ ಆಯುತ್ತವು. ಅಷ್ಟ ಭಾಗ್ಯಗಳ ನಮ್ಮ ಕರ್ತರ ದಿವ್ಯ ವಾಕ್ಕಿನಿಂದ ಕೇಳಿದಂತೆ ಇರುವದು.—೧ನೇದು. ಮನೋ ದರಿದ್ರವುಳ್ಳವರು ಭಾಗ್ಯವಂತರು, ಯಾಕೆಂದರೆ ಮೋಕ್ಷ ರಾಜ್ಯವಾದದ್ದು ಅವರದಾಗಿದೆ.—೨ನೇದು. ಶಾಂತಿಯುಳ್ಳವರು ಭಾಗ್ಯವಂತರು, ಯಾಕಂದರೆ ಭೂಮಿಯನ್ನಾಳುವರು.—೩ನೇದು. ಅಳುವವರು ಭಾಗ್ಯವಂತರು, ಯಾಕಂದರೆ ಉಪಶಮನವ ಹೊಂದುವರು.—೪ನೇದು. ನೀತಿಯನ್ನು ನೋಡಿ ಕ್ಷುಧೆ ತೃಷಿಯುಳ್ಳವರು ಭಾಗ್ಯವಂತರು, ಯಾಕಂದರೆ ತೃಪ್ತಿ ಹೊಂದುವರು.—೫ನೇದು. ದಯಾಗುಣಶಾಲಿಗಳು ಭಾಗ್ಯವಂತರು, ಯಾಕಂದರೆ ದಯಾ ಹೊಂದುವರು.—೬ನೇದು. ಶುದ್ಧ ಮನಸ್ಸುಳ್ಳವರು ಭಾಗ್ಯವಂತರು, ಯಾಕಂದರೆ ಅವರು ಸರ್ವೇಶ್ವರನ ದರ್ಶನವನ್ನು ಪಡೆಯುವರು.—೭ನೇದು. ಸಮಾಧಾನ ಗುಣಶಾಲಿಗಳು ಭಾಗ್ಯವಂತರು, ಯಾಕಂದರೆ ಸರ್ವೇ

శ్వరన మక్కళు అన్నిసికొళ్ళల్పడువరు.—೭నేదు. నీతి గోస్కర ఉపద్ర పడువవరు భాగ్యవంతరు, యాకందరె మోక్షరాజ్యవాదద్దు అవరదాగిధె.

೨నే ఆయుత్తవు. ఈ అష్ట భాగ్యగళ అర్థవన్ను గ్రహింస బేకెంత దేవానుగ్రహవన్ను కేళువదు.

೧నే యోజనె.—సర్వేశ్వరన సకల జ్ఞానద్రవ్య సకల శాస్త్ర నిక్షేపవుళ్ళవరూ దివ్య గురువూ ఆగిరువ జేసునాథస్వామి, లౌకిక కథెగళన్నూ వ్యర్థ ప్రసంగగళన్నూ కేళదె, నిజవాద శిష్ట మార్గవన్నూ తరుణోపాయవన్నూ పాశ్కైసిదరు. నేమకర్తనాగిద్దు, వేదార్థవ కేళువదరల్లి సూక్ష్మవాగిద్ద బుద్ధియున్ను చైలు మాడి, అధిక సాంగవన్ను బోధిసిదరు. మహా ఉచితవిధవాగి బహిరంగ మాత్ర బెళగదె, అంతఃకరణవ శుద్ధికరిసి, ధైర్యవ హుట్టిసి, త్రాణె కొట్టు, మనోహరవాగువంతె వ్యాఖ్యానా మాడిదరు. స్వామీ, నిమ్మ దివ్య సమక్షమదల్లి మాతాడిదరె, ననగె బుద్ధి బరుత్తె; తావు ఏనాదరూ కట్టళె మాడిదరె, నిమ్మ కరుణ కటాక్షదింద నడిసువెను.

೨నే యోజనె.—ఈ అష్ట భాగ్యగళు పూర్వవూ నూతనవూ ఆగివె. పూర్వవు యాకెందరె, యావ కాలదల్యాదరూ యావ స్థితియల్యాదరూ ఇంథవరు భాగ్యవంతరూ, మిక్కవరు నిర్భాగ్యస్థరూ సహజవే. నూతనవు యాకెందరె, జేసునాథ సామియు బారద ముంచె గుప్తవాగిద్దవు: అవరే వాక్యదిం

ದಲೂ ನಡತೆಯಿಂದಲೂ ಪ್ರಸಿದ್ಧಿ ಮಾಡಿದರು. ಲೋಕಸ್ಥರೂ ಅಜ್ಞಾನಿಗಳೂ ಶರೀರದ ಸುಖ ಪ್ರೀತಿ ಮಾಡುವಂಥವರೂ ಏನೇನು ಕೇಡೆಂತಲೂ ನಿರ್ಭಾಗ್ಯವೆಂತಲೂ ಶ್ರಮವೆಂತಲೂ ನೆನಸುತ್ತಾರೋ, ಅದನ್ನೇ ನಿಜವಾದ ಭಾಗ್ಯ ಐಶ್ವರ್ಯ ಶುಭವೆಂತ ಎಣಿಸಿಕೊಳ್ಳ ಬೇಕೆಂಬುವಂಥ ಬೋಧನೆ ನೂತನವಾದ ಬೋಧನೆಯಲ್ಲವೋ?

3ನೇ ಯೋಚನೆ: ಅಷ್ಟ ಭಾಗ್ಯಗಳ ಅರ್ಥವೇನೆಂದು ನಿಧಾನಿಸುವದು.

೧ನೇ ಭಾಗ್ಯ: ಮನೋ ದರಿದ್ರವುಳ್ಳವರು ಭಾಗ್ಯವಂತರು, ಯಾಕೆಂದರೆ ಮೋಕ್ಷ ರಾಜ್ಯವು ಅವರದಾಗಿಧೆ.— ಮನೋದರಿದ್ರರಾದವರು ನಾನಾವಿಧಗಳುಂಟು. ಸ್ವಾಮಿಯ ವಾಕ್ಯ ಮೀರುವದಕ್ಕಿಂತ ಸಕಲವನ್ನು ವರ್ಜಿತ ಮಾಡುವದಕ್ಕೆ ಸನ್ನಾಹ ಪಟ್ಟವನು ಮನೋದರಿದ್ರನೇ ಸರಿ. ಸ್ಪೀರಿತುಸಾಂಕ್ತುವಿನ ಅನುಗ್ರಹದಿಂದ ಜೇಸುನಾಥಸ್ವಾಮಿಯ ಬೆಂಬಳಿಯಾಗಿ ಬರ ಬೇಕೆಂತ ಸರ್ವಸಂಗ ಪರಿತ್ಯಾಗವ ಮಾಡಿದವನೂ, ಅಹಂಕಾರ ಮಮಕಾರವಿಲ್ಲದವನೂ, ತನ್ನ ಬುದ್ಧಿ ತನ್ನ ಬಲ ತನ್ನ ಪುಣ್ಯವ ನಂಬದೆ ನರರ ಸ್ತುತಿ ಬಹುಮಾನ ಅನುಸರಣೆ ಇದೆಲ್ಲ ತೃಣೀಕರಿಸುವಂಥವನೂ ಮನೋದರಿದ್ರನು. ಇದಲ್ಲದೆ ಮನ ಇಂದ್ರಿಯಾದಿಗಳನ್ನೂ ಮನೋವೃತ್ತಿಗಳನ್ನೂ ಬಿಟ್ಟಂತೆ ಹಿರಿಯರ ಕೆಳಗೆ ಸಂತೋಷವಾಗಿ ನಡೆದು, ದುರ್ಗುಣವಿಲ್ಲದೆಯೂ, ಆಶೆ ಇಲ್ಲದೆಯೂ: ಸ್ವಾಮಿ, ದೇವರವರೇ ಹೊರ್ತು ನನಗೆ ಪರಲೋಕದಲ್ಲಿಯೂ ಭೂಲೋಕದಲ್ಲಿಯೂ ಮತ್ತೇನು ಕೆಲಸವಿಲ್ಲವೆಂದವನೂ ಮನೋದರಿದ್ರನು. ತನ್ನೊ

ಳಿಗಿರುವಂಥ ಮೇಲುಗಳೆಲ್ಲ ಸಾಮರ್ಥ್ಯ ವಿದ್ಯಾ ಪ್ರೌಢಿಮೆ ಶಾಸ್ತ್ರ ಧರ್ಮ ಪುಣ್ಯ ನಿಷ್ಠೆ ಇವೆಲ್ಲವು ಸ್ವಾಮಿಯ ದಯದಿಂದ ಬಂದವೆಂತಲೂ, ತನ್ನಿಂದಲೋ ಅಂದರೆ ದೀನತ್ವವೂ ಚಂಚಲವೂ ಅಹಂಕಾರವೂ ಅವಘಡವೂ ಆಟಂಕವೂ ದುರ್ಬಲವೂ ಪಾಪವೂ ಮತ್ತೇನಿಲ್ಲವೆಂತಲೂ ಯಥಾರ್ಥವಾಗಿ ಯೋಚಿಸಿದಂಥವನು ಮನೋದರಿದ್ರನು. ಜೇಸುನಾಥಸ್ವಾಮಿ ಇದೆಲ್ಲ ನಡತೆಯಿಂದ ಪಾಲೈಸಿದರು. ನಮ್ಮ ಹೃದಯದಿಂದ ದುರಾಶೆಗಳನ್ನು ಕಿತ್ತು ಹಾಕುವದಕ್ಕೆ ಅಷ್ಟು ಪ್ರಯಾಸ ಪಟ್ಟಂಥವರು ತಮ್ಮ ಸ್ವಂತ ಮನದೊಳು ಒಂದು ಕ್ಷಣವಾದರೂ ಇರಗೊಡಿಸುವರೋ? ನಿಜ ದರಿದ್ರರಾಗ ಬೇಕೆಂದು ಸರ್ವ ದರಿದ್ರದಲ್ಲಿ ಹುಟ್ಟಿ, ಈ ಭೂಲೋಕದಲ್ಲಿ ಪ್ರವರ್ತಿಸಿದ ದಿನಗಳಾದ್ಯಂತ ಗೃಹವಿಲ್ಲದೆಯೂ ಸ್ವಾಸ್ಥ್ಯವಿಲ್ಲದೆಯೂ ಸರ್ವಸಂಗ ಪರಿತ್ಯಾಗವ ಮಾಡಿಕೊಂಡಿದ್ದರು. ಮರಣ ಹೊಂದುವಾಗ ತಾಯಿ ಮಾತ್ರ ಅವರಿಗೆ ನಿಕ್ಷೇಪವಾಗಿದ್ದಳು, ಅದು ಸಹ ಮರಣ ಹೊಂದದ ಮುಂಚೆ ಕೊಟ್ಟು ಬಿಟ್ಟರು. ಮರಣ ಹೊಂದಿದ ಬಳಿಕ, ಶಿಷ್ಯರು ವಸ್ತ್ರಗಳ ಕೊಂಡು ಹೊದ್ದಿಸಿದರು. ಸ್ವಾಮಿಗೆ ಸಮಾಧಿ ಇಲ್ಲದಿದ್ದಾಗ, ಒಬ್ಬ ಶಿಷ್ಯನು ತನಗಾಗಿ ತೋಡಿದ ಸಮಾಧಿಯನ್ನು ಸ್ವಾಮಿಗೆ ಕೊಟ್ಟನು. ಅದಕ್ಕಿಂತಲು ಹೆಚ್ಚಾದ ದರಿದ್ರವ ಎಣಿಸ ಬಹುದೇ? ಮನದೊಳು ಗರ್ವವಿಲ್ಲದೆಯೂ, ತಮಗೆ ಕೀರ್ತಿ ಹುಡುಕದೆಯೂ, ಪಿತನಾದ ಸರ್ವೇಶ್ವರನ ಸ್ತೋತ್ರ ಮಾತ್ರವೇ ಕೋರಿದರು. ನಮ್ಮನ್ನು ನೋಡಿ ಶಾಂತವೂ ತಾಳ್ಮೆಯೂ ಪಾಲೈಸಿರಿ ಎಂತ ಪಾಲಿಸಿದರಲ್ಲ? ತಮ್ಮ ಚಿತ್ತವನ್ನು ವರ್ಜಿಸಿ ಪಾಲಿಸ ಕರುಣಿಸಿ

ದ್ದೇನಂದರೆ: ಪಿತನಾದ ಸರ್ವೇಶ್ವರನ ಚಿತ್ತದ ಮೇರೆಗೆ ನಡೆಯ ಬಂದೆನು, ನನ್ನ ಚಿತ್ತವ ಮಾಡುವದಕ್ಕೆ ಬರಲಿಲ್ಲವು; ಪಿತನೇ, ನನ್ನ ಚಿತ್ತವಲ್ಲ, ನಿಮ್ಮ ಚಿತ್ತವೇ ಆಗಲಿ; ಪಿತನಾದ ಸರ್ವೇಶ್ವರನ ಚಿತ್ತವ ಮಾಡುವದು, ಅದೇ ನಮ್ಮ ಆಹಾರವು. ತಮ್ಮದೆಲ್ಲಾ ಪಿತನಾದವರದು ಎಂತ ಅನೇಕಾವರ್ತಿ ತಿಳಿಯ ಮಾಡಿದರು.

ಮತ್ತು ದರಿದ್ರರಿಗೆ ಬರುವ ಶ್ಲಾಘವನ್ನು ಧ್ಯಾನಿಸುವದು. ಮೋಕ್ಷ ರಾಜ್ಯವು ಅವರದಾಗಿಥೆ. ಮೋಕ್ಷ ಭಾಗ್ಯವು ಸಕಲ ಭಾಗ್ಯಗಳಲ್ಲಿ ಉಚಿತವಾದ ಭಾಗ್ಯವೆಂದು ತಿಳಿಯ ಪಡಿಸುವಂತೆ, ಈ ಲೋಕದಲ್ಲಿ ರಾಜ್ಯಕ್ಕಿಂತ ಮೇಲು ಇಲ್ಲದ ಕಾರಣ, ಮೋಕ್ಷಭಾಗ್ಯವು ರಾಜ್ಯವೆಂದು ಹೇಳಲ್ಪಟ್ಟಿತು. ತಮ್ಮ ಮುಖಾಂತ್ರದಿಂದ ಬಿಟ್ಟು ಬಿಟ್ಟ ಲೌಕೀಕ ಭಾಗ್ಯಕ್ಕೆ ಬದಲಾಗಿ ಮೋಕ್ಷ ರಾಜ್ಯವನ್ನು ಕೊಟ್ಟಲ್ಲಿ ಇಷ್ಟು ಬಡ್ಡಿ ಇಷ್ಟು ಲಾಭವೆಂದು ಹೇಳ ಶಕ್ಯವುಂಟೋ? ಅನಿತ್ಯವಾಗಿ ಕೆಟ್ಟು ಹೋಗುವ ಅಲ್ಪ ವಸ್ತುಗಳನ್ನು ವಿಸರ್ಜಿಸಿ ಬಿಟ್ಟದ್ದಾಯಿತು: ಬದಲು ನಿತ್ಯವಾಗಿ ಕೆಡದ ಸಂಪೂರ್ಣ ತೃಪ್ತಿಯುಂಟಾಯಿತು!

೨ನೇ ಭಾಗ್ಯ: ಶಾಂತಿಯುಂಟಾದವರು ಭಾಗ್ಯವಂತರು, ಯಾಕೆಂದರೆ ಅವರು ಭೂಮಿಯನ್ನು ಆಳುವರು.—೧ನೇದು. ಶಾಂತ ಗುಣಸ್ಥನು ಕೋಪವನ್ನು ಶಾಂತ ಪಡಿಸಿ, ಮತ್ಸರ ಬಿಟ್ಟು ಸಹಿಸಿ, ನೀತಿ ಕೋಪ ತರುವಾಗ ಗುಣವ ಗ್ರಹಿಸಿಕೊಂಡು, ನ್ಯಾಯ ಮಾರ್ಗವ ತಪ್ಪದೆ, ದಮೆಯೆಂಬ ಉಗ್ರ ನಿಗ್ರಹವ ತೋರಿಸುವನು.—೨ನೇದು. ಮಧುರ ವಚನಗಳಾಡಿ, ಅಭಿಮುಖದವರಲ್ಲಿ

ಒಬ್ಬರ ಮನಸ್ಸು ನೋಯಿಸದೆ, ಎಲ್ಲರಿಗೂ ಉಪಕಾರವ ಮಾಡುವನು.—3ನೇದು. ರುಂಗೆಯುವರಿಗೆ ಮೋಂ ಚಿಟ್ಟಿಸಿಕೊಳ್ಳದೆ, ಅಪಮಾನ ಮಾಡಿದವನಿಗೆ ಬಹುಮಾನವ ಮಾಡುವನು. ಜೇಸುನಾಥಸ್ವಾಮಿ ಈ ಪ್ರಕಾರದಲ್ಲಿ ನಡೆಯುವ ಕೆಂದು ಇಸಾಯಾಸೆಂಬ ದೂರದೃಷ್ಟಿಯಾದವರು ಪಾಲಿಸಿ ಇದ್ದರು. ಹ್ಯಾಗಂದರೆ: ಇವರು ಚಿಂತಾಕ್ರಾಂತರು ಅಲ್ಲವು, ಕಲಹಪ್ರಿಯರು ಅಲ್ಲವು; ಇವರು ಕೂಗುವವರು ಅಲ್ಲವು. ಇವರ ಶಬ್ದ ಬೀದಿಗಳಲ್ಲಿ ಕೇಳಲ್ಪಡುವದಿಲ್ಲವು; ನಲುಗಿದ ಜುಕಬ್ಬು ಮುರಿಯುವದಿಲ್ಲವು; ಕೊಗೆಯುವ ಬತ್ತಿಯನ್ನು ಆರಿಸುವದಿಲ್ಲವು. ಮತ್ತು ಪ್ರಥಮಾಪೋಸ್ತಲರಾದವರು ಪಾಲಿಸಿದ ಮೇರೆಗೆ: ದೂಷಿಸಲ್ಪಟ್ಟವರಾಗಿ ಇರುವಲ್ಲಿ ತಾವು ದೂಷಿಸಲಿಲ್ಲವು; ಪಾಡು ಪಡುವಾಗ ಗದರಿಸಲಿಲ್ಲವು. ಅನ್ಯಾಯ ತೀರ್ಪು ಇಡುವವನ ಕೈಯಲ್ಲಿ ತಮ್ಮನ್ನು ತಾವೇ ಒಪ್ಪಿಸುತ್ತಾ ಇದ್ದರು. ತಿರಿಗಿ ನಮ್ಮ ಕರ್ತರು ತಾವೇ ಪಾಲಿಸಿದ್ದೇನಂದರೆ: ನಾವು ಶಾಂತವೂ ಮನೋದಾಕ್ಷಿಣ್ಯವೂ ಉಳ್ಳವರಾಗಿದ್ದೇವೆಂದು ನಮ್ಮಿಂದ ತಿಳಿದುಕೊಳ್ಳಿರಿ. ಶಾಂತಶಾಲಿಗಳಿಗೆ ಫಲವೇನಂದರೆ, ಅವರು ಭೂಮಿಯನ್ನು ಆಳುವರು. ತಮ್ಮ ಹೃದಯದ ಭೂಮಿಯೆಂಬ ದುರ್ವ್ಯಸನಗಳನ್ನೂ ಅರಿಷ್ಡ್ವರ್ಗಗಳನ್ನೂ ಆಶೆ ವಿಷಯಗಳನ್ನೂ ಆಳುವರು. ಶಾಂತಿಯಿಂದ ತಮ್ಮ ಕೆಲಸಗಳನ್ನು ಕಡೆಹಾಯಿಸಿದವರು ಮನುಷ್ಯರ ಕೀರ್ತಿಗಿಂತಲು ಅಧಿಕವಾಗಿ ಸ್ನೇಹಿಸಲ್ಪಡುವರು; ಆದ್ದರಿಂದ ಶಾಂತರು ಪರರ ಹೃದಯವನ್ನಾಳುವರು. ಜೀವಿತರ ಭೂಮಿ ಎಂಬ ಸ್ಥಿರವಾದ ಸ್ಥಳವನ್ನು ತೆಗದುಕೊಳ್ಳುವರು. ಮೋಕ್ಷದಲ್ಲಿ ಶಾಂತರು

ಸ್ವತಂತ್ರಿಸಿಕೊಂಡ ಸ್ಥಿರವಾದ ಸ್ವಾಸ್ಥ್ಯವು ಅವರಿಗೆ ದೊರಕುವದರಿಂದ, ಲೋಕ ಸ್ವತಂತ್ರದ ನಷ್ಟ ನಾಶನವನ್ನು ಗಣನೆಗೆ ತರದೆ, ಮೋಕ್ಷದೊಳು ವಾಸವಾಗಿದ್ದಂತೆ, ಚಿಂತೆ ಮಾಡದೆ ನಷ್ಟಗಳನ್ನೆಲ್ಲ ಅನುಭವಿಸುತ್ತಿರುವರು.

3ನೇ ಭಾಗ್ಯವು: ಅಳುವವರು ಭಾಗ್ಯವಂತರು, ಯಾಕೆಂದರೆ ಅವರಿಗೆ ಉಪಶಮನವುಂಟಾಗುವದು.—ಪಾಪ ಮಾಡಿದ್ದರಿಂದಲೂ ಪಾಪದ ಮೇಲೆ ಮನಸ್ಸು ಬಾಗುವದರಿಂದಲೂ ಅಳುವವರು ಕೆಲವರು. ಲೆಖ್ಖವಿಲ್ಲದ ಪಾಪಗಳು ಪ್ರವರ್ತಿಸುತ್ತವೆಯೆಂತಲೂ ಲೆಖ್ಖವಿಲ್ಲದ ಜನರು ನರಕದೊಳು ಬೀಳುತ್ತಾ ಇದ್ದಾರೆಂತಲೂ ಕಂಡು ಅಳುವವರು ಕೆಲವರು. ಭಕ್ತಿಯಿಂದ ಸ್ವಾಮಿಯನ್ನು ನೋಡ ಬೇಕೆಂತ ಅಳುವವರು ಕೆಲವರು. ಮತ್ತು ಜೇಸುನಾಥಸ್ವಾಮಿ ಎಂದಿಗಾದರೂ ನಕ್ಕವರಲ್ಲವೆಂತಲೂ ಅನೇಕಾವರ್ತಿ ಅತ್ತರೆಂತಲೂ, ನಮ್ಮ ಪಾಪಗಳಿಗಾಗಿ ರಕ್ತ ಬೆವರು ಬೆವರುವ ಮಟ್ಟಿಗೂ ದುಖ್ಖವಾಗಿದ್ದರೆಂತಲೂ ಧ್ಯಾನಿಸಿ ಅಳುವವರಿಗೆ ಫಲವಾಗಿ ಉಪಶಮನವುಂಟಾಗುವದು. ಮೋಕ್ಷ ಭಾಗ್ಯವಾದದ್ದು ಸಕಲ ದುಖ್ಖ ಕಾರಣಗಳನ್ನು ಪೂರ್ಣವಾಗಿ ಪರಿಹರಿಸುತ್ತೆ. ಅಲ್ಲಿ ಪಾಪದ ಭಯ ಪಾಪದ ತಂತ್ರ ಒಂದೂ ಇಲ್ಲವು; ಕೋರಿದ ಶುಭವು ಸಂಪೂರ್ಣವೂ ಶಾಶ್ವತವೂ ಆಗಿಹೆ. ಪಾಪದ ರಾಜ್ಯವು ನಿರ್ಮೂಲವಾಗುವದು.

4ನೇ ಭಾಗ್ಯವು: ನೀತಿಗೋಸ್ಕರ ದೀಪನ ದಾಹವುಳ್ಳವರು ಭಾಗ್ಯವಂತರು, ಯಾಕೆಂದರೆ ಅವರು ತೃಪ್ತಿ ಹೊಂದುವರು.—ನೀತಿಯೆಂದರೆ, ಪವಿತ್ರ ಮಾಡಿ ಆತ್ಮದಲ್ಲಿ ನೆಲೆಗೊಳ್ಳುವ ದೇವಿಷ್ಟ ಪ್ರಸಾದವೂ, ಮತ್ತು ಆ ದಿವ್ಯ ಇಷ್ಟ

ದಿಂದ ಮಾಡುವ ಸಕಲ ಪುಣ್ಯ ಕೃತ್ಯಗಳೂ. ಇದಲ್ಲದೆ ಈಗ ಆತ್ಮದಲ್ಲಿ ಆರಂಭಿಸಿದ ಮೋಕ್ಷ ಪ್ರಾಪ್ತವೂ ಆಗ ಕಡೆ ತೇರಿದ ಸಂಪೂರ್ಣವಾಗುತ್ತೆ. ನಿಷ್ಠಾ ಮಾರ್ಗ ಸತ್ಯ ಅನುಷ್ಠಾನಗಳು ನಡೆಯ ಬೇಕೆಂತ ಅತಿ ಕಾಂಕ್ಷೆಗೊಳ್ಳುವದೂ, ಅಧಿಕಾಧಿಕವಾಗಿ ಯೋಗವುಚಿತವನ್ನಾ ಸಕಲ ನೀತಿಯಲ್ಲಿಯೂ ಸಕಲ ಶುದ್ಧತನದಲ್ಲಿಯೂ ಶ್ರೇಷ್ಠತ್ವವನ್ನಾ ಕೋರಿಕೊಳ್ಳುವದೂ, ಪುಣ್ಯದ ಸಾಂಗೋಪಾಂಗವನ್ನು ಅಪೇಕ್ಷಿಸುವದೂ, ನಮಗೆ ನೀತಿಯಾಗಿರುವಂಥ ಜೇಸುನಾಥ ಸ್ವಾಮಿಯನ್ನು ನೋಡಿ ಕ್ಷುಧೆ ತೃಷಿಗೊಂಡಿರು ವದೂ, ಸತ್ ಪ್ರಸಾದದಿಂದಲೂ ನಿಜ ಐಕ್ಯ ತೀಕ್ಷಣವುಳ್ಳ ವಿಶ್ವಾಸದಿಂದಲೂ ಜ್ಞಾನ ಐಕ್ಯ ಬರ ಬೇಕೆಂತ ಮನದೊಳು ಅತ್ಯಾಭಿಲಾಷೆಗೊಂಡಿರುವದೂ, ಮೋಕ್ಷವೆಂಬ ಸ್ವದೇಶವನ್ನಾ ಪರಮ ನೀತಿಯುನ್ನಾ ಅಪೇಕ್ಷಿಸುವದೂ, ಇವುಗಳೇ ನೀತಿಗೆ ಸಂಬಂಧವಾದ ಕ್ರಿಯೆಗಳು. ಈ ನೀತಿಯ ಫಲಗಳ ಮುಖಾಂತ್ರವಾಗಿ, ಪರದಲ್ಲಿ ಆತ್ಮವು ದೇವರನ್ನು ಪ್ರತ್ಯಕ್ಷ ಮುಖವಾಗಿ ನೋಡಿ, ಜ್ಞಾನ ವಿಧವಾಗಿ ದೇವರೊಂದಿಗೆ ಭಕ್ತಿಯಿಂದ ಐಕ್ಯವಾಗುವದು. ಇದೆಲ್ಲ ಜೇಸುನಾಥಸ್ವಾಮಿ ಉಚಿತ ಪ್ರಕಾರವಾಗಿ ವಾಕ್ಯದಿಂದಲೂ ಚರಿತ್ರೆಯಿಂದಲೂ ಪಾಶ್ಚೈಸಿದರು. ಪಿತನಾದ ಸರ್ವೇಶ್ವರನ ಚಿತ್ತವನ್ನು ನಡಿಸುವದೂ ಅವರ ಸ್ತೋತ್ರವಾಗಿ ನಮ್ಮನ್ನು ರಕ್ಷಿಸುವದೂ ತಮಗೆ ಆಹಾರವಾಗಿತ್ತು. ಆದ್ದರಿಂದಲೇ ಶಿಲುಬೆಯಲ್ಲಿ ಜಡಿಯಲ್ಪಟ್ಟಿರುವಾಗ ದಾಹವುಂಟೆಂತ ಪಾಲಿಸಿದರು. ಶಾಂತಿಶಾಲಿಗಳಿಗೆ ಬರುವ ಫಲವೇನಂದರೆ, ಅವರು ತೃಪ್ತಿ ಹೊಂದುವರು. ಇಲ್ಲಿ ಪುಣ್ಯ ಫಲಾಮೃತವು ಆತ್ಮಕ್ಕೆ ಎಷ್ಟು

సురిదరూ ఆశె తీరదు. అల్లి మాత్ర సకల భాగ్య రాశిగళాగి దయ పాలిసువంథ స్వామియన్ను కొండదరె, అధిక కోరదె మనస్సు తృప్తియాగి ఆశె తీరువదు.

౫నే భాగ్యవు: దయ మాడువంథవరు భాగ్యవంతరు, యాకెందరె అవరు దయ హొందువరు.—దయద విషయగళన్నూ అదరొందిగె కూడిద ధర్మగళన్నూ నడిస బేకు. అవు యావవెందరె, శరీర సంబంధవాదవుగళు ఏళుంటు.—౧నేదు. హసివెగొండు ఇరువవరిగె అన్న నీడువదు.—౨నేదు. దాహగొండిరువవరిగె దాహ శాంతి మాడువదు.—౩నేదు. వస్త్ర హీనరిగె ఉడ కొడువదు.—౪నేదు. కారాగృహదల్లి ఇరువంథవరన్నూ వ్యాధిష్ఠరన్నూ సంధిసి పరామరిసువదు.—౫నేదు. పరదేశిగళాగి ఇరువవరిగె స్థళ కొడువదు.—౬నేదు. సెరెయల్లి సిక్కిరువంథవరన్ను బిడుగడె మాడువదు.—౭నేదు. సత్తవరన్ను సమాధియొళు స్థాపనె మాడువదు. ఇవే సరి.—మత్తు ఆత్మ సంబంధికవాగిరువంథ దయదొందిగె కూడిద ధర్మగళు ఏళుంటు.—౧నేదు. బుద్ధి హీనరిగె సుబుద్ధి హేళువదు.—౨నేదు. అరియదవరిగె ఆత్మ సంబంధవాద కార్యగళన్ను పాఠిసువదు.—౩నేదు. దుఃఖాక్రాంతరాగిరువవరిగె దుఃఖోపశమన మాడువదు.—౪నేదు. తప్పు మాడిదవరిగె పారుపత్య మాడిసువదు.—౫నే

ದು. ತನಗೆ ಮಾಡಿದ ತಪ್ಪುಗಳನ್ನು ತಾಳುವದು.—೬ನೇದು. ಪರರು ಅರಿಯದೆ ಮಾಡಿದ ಕಾರ್ಯಗಳನ್ನು ಮನ್ನಿಸುವದು.—೭ನೇದು. ಜೀವಿತರಿಗಾಗಿಯೂ ಸತ್ತವರಿಗಾಗಿಯೂ ಬೇಡಿಕೊಳ್ಳುವದು. ಈ ಧರ್ಮಗಳ ನಡಿಸುವಾಗ ಒಬ್ಬನಾದರೂ, ಹಂಗೆಯುವನನ್ನೂ ಮೊದಲಾಗಿ, ಅಶ್ರದ್ಧೆಯಿಂದ ತಳ್ಳ ಬಾರದು. ಸಕಲ ಪ್ರಸ್ತಾಪಗಳಲ್ಲಿ ಕೈಲಾದಷ್ಟು ಮಾಡ ಬೇಕು. ತನ್ನಿಂದ ಕೂಡದ ಸಮಯದಲ್ಲಿ ಪರರ ಕೈಯಿಂದಲಾದರೂ ಮಾಡಿಸ ಬೇಕು. ಹ್ಯಾಗಾದರೂ ಕಷ್ಟ ಜೀವಿಗಳಿಗಾಗಿ ಸ್ವಾಮಿಯನ್ನು ಬೇಡಿಕೊಳ್ಳ ಬೇಕು. ಇದೆಲ್ಲಾ ದಯೆಯುಳ್ಳ ಮನಸ್ಸಿನಿಂದಲೇ ಮಾಡ ಬೇಕಾಗಿರುತ್ತದೆ. ಜೇಸುನಾಥಸ್ವಾಮಿಯವರ ಮಾತೃಕೆಯನ್ನು ನೋಡಿರಿ. ಎಲ್ಲರಿಗೂ ಉಪಕಾರವ ಮಾಡಿ, ಪಿಶಾಚಿಯಿಂದ ಬಾಧಿಸಲ್ಪಟ್ಟವರೆಲ್ಲರನ್ನು ರಕ್ಷಿಸುವರು; ದೇಶ ಸಂಚಾರ ಮಾಡುತ್ತಾ ಇರುವರು; ಕುಂಟರಿಗೆ ಕಾಲುಗಳನ್ನೂ, ಕಿವುಡರಿಗೆ ಶ್ರವಣವನ್ನೂ, ಮೂಕರಿಗೆ ಮಾತಾಡುವಿಕೆಯನ್ನೂ, ಅಂಧಕರಿಗೆ ದೃಷ್ಟಿ ಪಾಟವನ್ನೂ, ವ್ಯಾಧಿಷ್ಠರಿಗೆ ಸ್ವಸ್ಥವನ್ನೂ, ಸತ್ತಂಥವರಿಗೆ ಪ್ರಾಣವನ್ನೂ, ಪಾಪಾತ್ಮರಿಗೆ ಪಾಪದ ನಿವಾರಣೆಯನ್ನೂ ದಯಪಾಲಿಸುತ್ತಾ ಬರುವರು. ರಕ್ಷಕರು ಪಾಲಿಸಿದ್ದೇನಂದರೆ: ಬಲಿ ಒಲ್ಲೆವು, ದಯ ಬೇಕೆಂಬ ವಾಕ್ಯವೇನೆಂತ ತಿಳಿದುಕೊಳ್ಳಿರಿ. ನೀವು ದಯಾಪರರಾಗಿರ್ರಿ. ನಮ್ಮ ಆಪತ್ತುಗಳನ್ನು ನಿವಾರಣೆ ಮಾಡುವಂಥ, ಸಕಲ ತಂತ್ರಗಳನ್ನು ಜಯಿಸಿದ ದಿವ್ಯಗುರುವಾದವರು ನಮಗುಂಟೆಂದು ಅರ್ಚ್ಯ. ಚಿನ್ನಪ್ಪನವರು ಹೇಳಿದ್ದಾರೆ. ದಯವುಳ್ಳವರಿಗೆ ಭರುವ ಫಲವು ಎಂತೆಂದರೆ, ಅವರು ಶರೀರದಲ್ಲಿಯೂ

ಆತ್ಮದಲ್ಲಿಯೂ ದಯೆಯನ್ನು ಹೊಂದುವರು. ಯಾವ ಅಳತೆ ಅಳೆಯುವರೋ, ಅದೇ ಅಳತೆ ಅವರಿಗೆ ಅಳೆಯಲ್ಪಡುವದು. ಮೋಕ್ಷಭಾಗ್ಯವಾದದ್ದು ಸಕಲ ದಯವು ಸಕಲ ಕರುಣೆಯು ಅನುಭವವಾಗಿಧೆ.

೬ನೇ ಭಾಗ್ಯವು: ಶುದ್ಧ ಮನಸ್ಸುಳ್ಳವರು ಭಾಗ್ಯವಂತರು, ಯಾಕೆಂದರೆ ಅವರು ಸರ್ವೇಶ್ವರನ ದರ್ಶನವ ಹೊಂದುವರು.—ಮನಸ್ಸಿನ ಶುದ್ಧತ್ವವೂ ಅತಿಶಯವಾದ ಭಕ್ತಿಯೂ ಒಂದೇ. ಅದರ ಲಕ್ಷಣಗಳು ಯಾವವಂದರೆ: ಪಾಪ ರಹಿತವುಳ್ಳ ಹೃದಯವೂ ಪವಿತ್ರ ವಿಚಾರಗಳ ಧರ್ಮಪ್ರಯೋಗದಿಂದ ತುಂಬಿದ ಬುದ್ಧಿಯೂ ಕದಲದ ವಿಶ್ವಾಸವೂ ಸ್ವಾಮಿಯ ಕೈಂಕರ್ಯದಲ್ಲಿಯೂ ಮನುಷ್ಯರ ಸೇವೆಯಲ್ಲಿಯೂ ಡಂಭಾಚಾರ ಬಿಡುವಿಕೆಯೂ. ಜೇಸುನಾಥಸ್ವಾಮಿಯ ಚಿತ್ತವು ಎಲ್ಲಕ್ಕಿಂತಲು ಪರಿಶುದ್ಧ ಚಿತ್ತವು: ಅವರಲ್ಲಿ ಶತ್ರುಗಳು ಸಹ ಯಾವಾಗ್ಯೂ ಲವಲೇಶ ತಪ್ಪು ನೋಡಲಿಲ್ಲವು. ಸೂರ್ಯನಿಗೆ ಕತ್ತಲೆ ಅಂಟಿಕೊಳ್ಳದ ಮೇರೆಗೆ, ಜೇಸುನಾಥಸ್ವಾಮಿಗೆ ಪಾಪ ಅಂಟುವದಿಲ್ಲವು. ಡಂಭಜ್ಞಾನಿಗಳ ಮೇಲೆಯೂ ಕಳ್ಳ ಭಕ್ತರ ಮೇಲೆಯೂ ಯಾವಾಗಲೂ ಅಸಹ್ಯವಾಗಿದ್ದರು. ಶುದ್ಧ ಮನಸ್ಸುಳ್ಳವರಿಗೆ ಫಲವೇನಂದರೆ, ಅವರು ಸರ್ವೇಶ್ವರನ ದರ್ಶನವ ಹೊಂದುವರು. ಮಾನಸ ನೇತ್ರದಿಂದ ಸ್ವಾಮಿಯನ್ನು ನೋಡುತ್ತೇವಲ್ಲವೇ? ಸೂರ್ಯನನ್ನು ವ್ಯಾಧಿಯುಳ್ಳ ಕಣ್ಣಿನಿಂದಲೂ ಅಶುದ್ಧ ಕಣ್ಣಿನಿಂದಲೂ ನೋಡಕೂಡದ ಮೇರೆಗೆ, ಪರಿಶುದ್ಧ ಸ್ವಾಮಿಯನ್ನು ಅಶುದ್ಧ ಮನಸ್ಸಿನಿಂದ ನೋಡಲಶಕ್ಯವು. ಶುದ್ಧ ಮನಸ್ಸುಳ್ಳವರು ಮಾತ್ರವೇ ಸ್ವಾಮಿಯನ್ನು ಪ್ರತ್ಯಕ್ಷ

ವಾಗಿ ದರ್ಶಿಸುವರು. ಆ ದರ್ಶನವು ಮೋಕ್ಷ ಭಾಗ್ಯಕ್ಕೆ ಆಧಾರವಾಗಿದೆ.

೭ನೇ ಭಾಗ್ಯವು: ಸಮಾಧಾನಪರರು ಭಾಗ್ಯವಂತರು, ಯಾಕೆಂದರೆ ಅವರು ಸರ್ವೇಶ್ವರನ ಮಕ್ಕಳೆಂತ ಕರೆಯಲ್ಪಡುವರು.—ಸಮಾಧಾನ ಪ್ರಿಯರು ತಮ್ಮೊಳಗೆ ಸಮಾಧಾನವಾಗಿದ್ದು, ಶರೀರವನ್ನು ಬುದ್ಧಿಗೆ ಕೀಳ್ಪಡಿಸಿ, ಆಶೆಗಳನ್ನು ಮನಸ್ಸಿನ ಕೆಳಗಾಗ ಮಾಡಿ, ಬುದ್ಧಿಯನ್ನೂ ಮನಸ್ಸನ್ನೂ ಸರ್ವೇಶ್ವರನಿಗೆ ಕೀಳ್ಪಡಿಸಿ ನಡಿಸುತ್ತಾರೆ. ಮಿಕ್ಕ ಜನರೆಲ್ಲರನ್ನು ಸ್ನೇಹಿಸಿ ಅವರೊಂದಿಗೆ ಸಮಾಧಾನವಾಗಿರುತ್ತಾರೆ; ಪರರು ತಮ್ಮೊಳಗೆ ಸಮಾಧಾನವಾಗಿರುವಂತೆ ಮಾಡುತ್ತಾರೆ; ಮನುಷ್ಯರೆಲ್ಲರು ಸರ್ವೇಶ್ವರನ ದಯೆಯನ್ನು ಸಮಾಧಾನದಿಂದ ಸ್ವೀಕರಿಸಿಕೊಳ್ಳುವ ಹಾಗೆ ಅದಷ್ಟು ಮಾಡುತ್ತಾರೆ. ಜೇಸುನಾಥಸ್ವಾಮಿ ಪರಲೋಕದಿಂದ ನಮಗೆ ಸಮಾಧಾನ ತಂದು ಕೊಡುವಂತೆ ಚಿತ್ತೈಸಿದರು: ಆದ್ದರಿಂದ ಸಮಾಧಾನದ ರಾಯರೆಂದು ಸತ್ಯವೇದದಲ್ಲಿ ಕರೆಯಲ್ಪಡುತ್ತಾರೆ. ನಿಮಗೆ ಸಮಾಧಾನವಾಗಲಿ ಎಂದು ತಮ್ಮ ಶಿಷ್ಯರನ್ನು ಆಗಾಗ್ಯೆ ದೀವಿಸುತ್ತಾಯಿದ್ದರು. ತಮ್ಮ ಶಿಷ್ಯರಿಗೆ ಎಲ್ಲಿ ಹೋದರೂ ಸಮಾಧಾನ ಕೊಡಿರೆಂತ ಕಟ್ಟಳೆ ಮಾಡಿದರು. ಕಡೆಯಲ್ಲಿ ತಮ್ಮ ದಿವ್ಯ ರಕ್ತದಿಂದ ಪರಲೋಕದಲ್ಲಿಯೂ ಭೂಲೋಕದಲ್ಲಿಯೂ ಸಮಾಧಾನ ಮಾಡಿದರು. ಸಮಾಧಾನವುಳ್ಳವರಿಗೆ ಫಲವೇನೆಂದರೆ, ಸರ್ವೇಶ್ವರನ ಮಕ್ಕಳೆಂದು ಕರೆಯಲ್ಪಡುವರು. ವಿಶೇಷವಾದ ಪುತ್ರರ ಮೇರೆಗೆ, ತಂದೆಯ ಭಾಗ್ಯವನ್ನು ಅವರು ಸ್ವೀಕರಿಸುವರು.

೮ನೇ ಭಾಗ್ಯ: ನೀತಿಗೋಸ್ಕರ ಉಪದ್ರ ಪಡುವಂಥ

వరు భాగ్యవంతరు, యాకందరె మోక్షరాజ్యవు అవరదాగిరువదు.—ఇదరొళు ౪ కార్యగళ ధ్యానిస బేకు.—౧నేదు. ఉపద్రవేను? సకల ఆపత్తుగళ దినస్సుగళు.—౨నేదు. యారింద బరుత్తె? పుణ్యక్కె వైరియెంబ పిశాచియింద బరువదు. పిశాచియు దూతరాద మనుష్యరిందలూ పరరిందలూ అల్లదె, ఇన్ను నెంటరిందలూ బంధు మిత్రరిందలూ బరువదు. —౩నేదు. తప్పిగాగి బారదె పుణ్యక్కాగి బర బేకు. అర్థ్య. రాయప్పనవరు హాలిసిద మేరిగె, నరహంత్య నెంబవాగియూ కళ్ళ దూషకనెంబదాగియూ ఉపద్ర పడ బేడ; ఆదరె క్రీస్తువనాదదరింద శ్రమె పట్టరె, సంకోచ పడబేడ: అంథ నామాంకితక్కాగి స్వామిగె స్తోత్ర కేళ తక్కద్దు.—౪నేదు. ఉపద్ర పడువ బగె హ్యాగందరె, తాళిమెయాగియూ సంతోషవాగి యూ: జేసునాథస్వామియు నామక్కోస్కర ఉవద్ర పడువదక్కె నాను ప్రాప్తనాదెనెందు మహా ఆనంద కొండ బేకు. జేసునాథస్వామి ఈ నాల్కు విషయు గళల్లి ఇట్ట ప్రతియన్ను ధ్యానిసువదు. ఫలవు మోక్ష రాజ్యవాగిధె. ఆదరె ఎష్టు ఉపద్రగళిగె తాళి ఇరువె వో, అష్టు సంపత్తు అనుభవిసలుంటాగువదు.

೬ನೇ ಚಿಂತನೆ.

ಸತ್ಯ ಪುಸ್ತಕಗಳ ಓದುವಿಕೆಯೂ ಜ್ಞಾನ ಪ್ರಸಂಗಗಳ ಕೇಳುವಿಕೆಯೂ.

ಮನುಷ್ಯರನ್ನು ಬೋಧಿಸ ಚಿತ್ತವಾಗಿರಲಾಗಿ, ಸರ್ವೇಶ್ವರನು ಸತ್ಯವೇದವ ದಯಪಾಲಿಸಿ ಓದಿರೆಂತ ಅನೇಕಸಾರಿ ಕಟ್ಟಳೆ ಮಾಡಿದರೆಂದು ಅಂಗೀಕರಿಸ ತಕ್ಕದ್ದೇ. ಮೋಗಮಾರ್ಗವು ತಿಳಿಯ ಬೇಕಾದರೆ, ಸತ್ಯ ಪುಸ್ತಕಗಳನ್ನು ಪಾಠೈಸುವದೇ ಸರಿ: ಯಾರೆಂದರೆ ಸ್ವಾಮಿಯ ಚಿತ್ತಕ್ಕೆ ಯಾವಪ್ರಕಾರ ಸರಿಯಾಗಿರುವದೋ ವೇದಾರ್ಥದ ಬೋಧಕಗಳನ್ನು ಓದಿದವರಿಗೆ ತಿಳಿಯುವದು. ಸತ್ಯ ಪುಸ್ತಕಗಳು ಸ್ವಾಮಿಯ ಮಹಿಮೆಯನ್ನು ತಿಳಿಯಪಡಿಸಿ ಯಾವಪ್ರಕಾರ ಪ್ರವರ್ತಿಸ ಬೇಕೆಂತ ತೋರಿಸುವವು. ಪಾಪದ ದ್ರೋಹ ಅವಲಕ್ಷಣವನ್ನೂ ತೋರಿಸಿ, ಅದನ್ನು ಬಿಟ್ಟುಬಿಡುವ ಬಗೆ ಬಯಲು ಮಾಡುವವು. ಸಕಲ ಇಂದ್ರಿಯ ವಿಷಯಗಳನ್ನು ನೀಗಿಸುವ ಬುದ್ಧಿಯನ್ನು ಹುಟ್ಟಿಸುತ್ತವೇ; ಪುಣ್ಯ ಮಾರ್ಗಕ್ಕೆ ಕರೆಯುವ ಹಾದಿ ತಪ್ಪದೆ ಅವುಗಳಲ್ಲಿ ಪ್ರಕಾಶಿಸುತ್ತೆ; ಈ ಮಾತ್ರಕೆ ಆ ಮಾತ್ರಕೆಯಿಂದ ಧೈರ್ಯ ಹುಟ್ಟಿಸುತ್ತವೆ. ಇವನೂ ಅವನೂ ಈ ತಂತ್ರ ಆ ತಂತ್ರವನ್ನು ಜಯಿಸಿದರೆಂದೂ, ಈ ಧರ್ಮ ಆ ಧರ್ಮವ ಮಾಡಿದರೆಂದೂ, ಈ ಪ್ರಕಾರ ಕರ್ಮಾನುಷ್ಠಾನಗಳನ್ನು ನಡಿಸಿದರೆಂದೂ, ಸಕಲ ಆಪತ್ತುಗಳಲ್ಲಿ ಚಿಂತೆಯಿಲ್ಲದೆಯೂ ಸಕಲ ಭಾಗ್ಯಗಳ ಅನುಭವದಲ್ಲಿ ಅಹಂಕಾರವಿಲ್ಲದೆಯೂ ಸಮಚಿತ್ತವಾಗಿದ್ದರೆಂದೂ ನೋಡಿ, ಸಕಲ ಸ್ಥಿತಿಯವರು ಜ್ಞಾನ ಪ್ರಕಾಶ

ದಲ್ಲಿ ನಡೆಯ ಬರುವುದು. ತತ್ವ ಬೋಧಕರೆಲ್ಲರೂ ಸನ್ಯಾಸಿಗಳ ಮುಖ್ಯ ಜ್ಯೇಷ್ಠರೂ ಪೂರ್ವ ರುಷಿಗಳೂ ಜ್ಞಾನ ಸಿದ್ಧರೂ ಜ್ಞಾನ ಪುಸ್ತಕಗಳನ್ನು ಓದಿರೆಂತ ಬುದ್ಧಿ ಹೇಳಿದರು. ಓದಿದರೆ ಎಷ್ಟು ಮೇಲುಂಟಾಗುವದೆಂದು ದೃಷ್ಟಾಂತದಿಂದ ತಿಳಿಯ ಪಡಿಸುವೆವು.

ರೋಮ ಚಕ್ರವರ್ತಿಯು ಜೇರ್ಮನ್ಯ ರಾಜ್ಯದೊಳಿದ್ದ ತ್ರೆವಿರಾಪುರದಲ್ಲಿ ವಾಸ ಮಾಡುವಾಗ, ಒಂದು ದಿನ ಅವರು ಸಾಧಕ ನೋಡ ಹೋದ ಸಮಯದಲ್ಲಿ, ಅವರ ಸಮುಖಸ್ಥರಲ್ಲಿ ನಾಲ್ವರು ಅಳಂಗಗಳಾಚೆ ಸವಾರಿ ಹೋದರು. ಅವರಲ್ಲಿ ಇಬ್ಬರು ಸನ್ಯಾಸಿಗಳ ಪರ್ಣಾಶ್ರಮವನ್ನು ಕಂಡು ಪ್ರವೇಶಿಸಿದರು. ಆ ಪರ್ಣಶಾಲೆಯಲ್ಲಿ ರುಷೀಶ್ವರರು ಇಲ್ಲ: ಅರ್ಚ್ಯಶಿಷ್ಟ ಅಂತೋನಿ ಎಂಬವರ ಚರಿತ್ರೆ ಪುಸ್ತಕ ಮಾತ್ರವಿತ್ತು. ಆ ಪ್ರಬಂಧವ ಒಬ್ಬನು ಓದಲಾರಂಭಿಸಿದನು. ಓದಲು ಓದಲೂ ಮುನೀಶ್ವರನ ಅತಿಶಯತಪಸ್ಸಿನ ಮೇಲೆ ಆಶ್ಚರ್ಯವ ಹೊಂದಿ, ಪ್ರೇರೇಪಕವಾದ ದೇವಾನುಗ್ರಹದಿಂದ ಅವನ ಮನಸ್ಸು ಕರಗಿ ಹೋಗಲಾಗಿ, ಸ್ವಾಮಿಯ ಮೇಲೆ ಭಕ್ತಿಯೂ ತನ್ನ ಮೇಲೆ ಅಸಹ್ಯವೂ ಹುಟ್ಟಲು, ಲೌಕೀಕ ಭಾಗ್ಯಗಳು ವ್ಯರ್ಥ ಅನಿತ್ಯವೆಂದೂ ಪುಣ್ಯ ಫಲಿತವು ನಿತ್ಯವೆಂದೂ ಗ್ರಹಿಸಿಕೊಂಡು, ಕಣ್ಣುಗಳಲ್ಲಿ ಆನಂದಬಾಷ್ಪಗಳ ಸುರಿಸುತ್ತಾ, ಮನೋ ನಿರ್ಧಾರ ಮಾಡಿಕೊಂಡು, ಸ್ನೇಹಿತನಿಗೆ ಹೇಳಿದ್ದೇನಂದರೆ: ನಾವು ಯಾವದನ್ನು ಕುರಿತು ಭೂಪತಿಯ ಬಳಿಯಲ್ಲಿ ಸೇವಿಸುತ್ತೇವೆ? ಆತನ ಇಷ್ಟವ ಹೊಂದಲು ಸೇವಿಸುತ್ತೇವಲ್ಲವೇ? ಹೊಂದಿದಾಗ್ಯೂ ಎಷ್ಟು ದಿವಸ ಮಟ್ಟಿಗಿರುತ್ತೆ? ದೇವಿಷ್ಟವ ಹೊಂದ

ಬೇಕಾದರೆ ಈಗಲೇ ನನ್ನಿಂದಲಾಗುತ್ತೆ. ಅಭಿಮತವ ತೀರುವದಕ್ಕೆ ದೇವರಿಂದ ಮಾತ್ರವಾಗುವದು. ನಾನು ಇಲ್ಲಿಯೇ ಮರಣಪರ್ಯಂತಕ್ಕೂ ನಿಂತು, ಸರ್ವಸಂಗ ಪರಿತ್ಯಾಗವ ಮಾಡಿಕೊಂಡು, ಮುನಿಯಾಗಿಯೂ ತಪಸ್ವಿಯಾಗಿಯೂ ನಿಲ್ಲುವೆನು. ನೀನೂ ಕೂಡ ತಪಸ್ಸು ಮಾಡ ಮನಸ್ಸಿರಿಸಿದರೆ ಸರಿ; ಇಲ್ಲದಿದ್ದರೆ ನನ್ನ ಅಭೀಷ್ಟಗಳಿಗೆ ಪ್ರತಿಕೂಲವಾಗಿರ ಕೆಲಸವಿಲ್ಲವು, ಎಂಬದಾಗಿ ಹೇಳಿದನು. ಸ್ನೇಹಿತನು ಆ ಮಾತು ಕೇಳಿ, ಮನಸ್ಸು ಕರಗಿ: ನೀನು ಹೇಳಿದ್ದೆಲ್ಲ ಸಹಜವೇ; ನೀನು ಹೇಳಿದ ಪ್ರಕಾರ ಕೇಳುತ್ತೇನೆನ್ನಲು, ಇಬ್ಬರು ಆ ಸ್ಥಳದಲ್ಲಿ ತಪಸ್ಸುಗೊಂಡು ಅಲ್ಲಿ ನಿಂತರು.

ಈ ವರ್ತಮಾನವ ಆಗುಸ್ತೀನೆಂಬವರು ಪೋಂತಿಸ್ಯಾನೆಂಬವನಿಂದ ಕೇಳಿ, ತಾವು ಬರೆದ ಹಾಗೆ, ಅಂತಃಕರುಣ ನಾಚಿಕೆಯೊಂದಿಗೆ ಚಂಚಲಿಸಿ, ಮನಸ್ಸು ವಿಭಾಗವಾಗಿ, ಕಳವಳಗೊಂಡು, ವಾದ ಪ್ರತಿವಾದ ಶರೀರವೂ ಜ್ಞಾನವೂ ವ್ಯಾಜ್ಯ ಆಡಿದ ಮೇರೆಗೆ ಮನಸ್ಸಿನಲ್ಲಿಯೂ ಮುಖದಲ್ಲಿಯೂ ಕಲಾಪ ಹೊಂದಿ, ಆಲಿಪ್ಯುಸೆಂಬ ನನ್ನ ಸ್ನೇಹಿತನನ್ನು ನೋಡಿ ಕೂಗಿದ್ದೇನಂದರೆ: ಏನು ಮಾಡುತ್ತೀವೆ? ಇದೇನು? ಕೇಳಿದಿಯಾ? ಶಾಸ್ತ್ರವಿದ್ಯಹೀನರು ಎದ್ದು ಮೋಕ್ಷ ಲಗ್ಗೆ ಹತ್ತುತ್ತಾರಲ್ಲ! ನಾವೋ ವಿದ್ವಾಂಸರು ಹೃದಯವಿಲ್ಲದೆ ಇಲ್ಲಿ ಶರೀರದಲ್ಲಿಯೂ ರಕ್ತದಲ್ಲಿಯೂ ಹ್ಯಾಗೆ ಹೊರಳಿ ಇದ್ಧೇವೆ! ಇವರು ಮುಂದೆ ಹೋದರಲ್ಲ: ಹಿಂದೆ ಬರುವದು ನಾಚಿಕೆಯಾದರೆ, ಬಾರದಿರುವದು ಹೆಚ್ಚಾದ ನಾಚಿಕೆಯಲ್ಲವೋ? ನಾನು ಇವು ಮುಂತಾದವುಗಳನ್ನು ಹೇಳಿದ ಮೇಲೆ, ಆಲಿಪ್ಯನು ಆಶ್ಚರ್ಯ ಪಟ್ಟು ಮೌನ

ವಾಗಿ ನನ್ನನ್ನು ದೃಷ್ಟಿಸುತ್ತಾಯಿರಲಾಗಿ, ಆಚೆಗೆ ತೀವ್ರವಾಗಿ ಹೋದೆನು. ನನ್ನ ಮಾತುಗಳು ನನ್ನ ಸ್ನೇಹಿತನಿಗೆ ಸರ್ವಥಾ ಅಪರೂಪವಾಗಿ ಕಾಣುವದಲ್ಲದೆ, ಆಡಿದ ಮಾತುಗಳಿಗಿಂತ ನೆತ್ತಿಯೂ ಕೆನ್ನೆಗಳೂ ಕಣ್ಣುಗಳೂ ಮುಖವೆಲ್ಲದರ ವರ್ಣವೂ ಆತ್ಮದ ಕ್ಲೇಶವನ್ನು ತೋರಿಸುತ್ತಾ ಇದ್ದವು. ಮನೆಯ ಹಿಂದೆ ತೋಟವಿತ್ತು. ಅಲ್ಲಿ ನನ್ನ ಹೃದಯದ ವಿಕಲ್ಪದಿಂದ ಎಳಿಯಲ್ಪಟ್ಟು, ನಾನು ನನ್ನೊಂದಿಗೆ ತಗಲಿಕೊಂಡ ಉಗ್ರವ್ಯಾಜ್ಯವನ್ನು ಯಾರಾದರೂ ಅಡ್ಡಗಿಸ ಕೂಡದಂತೆ, ಹೋದೆನು. ಈ ಅಂತರಂಗವಾದ ವ್ಯಾಜ್ಯವು ಹ್ಯಾಗೆ ಕಡೆತೀರ‍್ಯಾತೋ ನಾನು ಅರಿಯದೆ ಇದ್ದೆನು, ದೇವರಿಗೆ ಮಾತ್ರ ತಿಳಿದಿತ್ತು. ಫಲವುಳ್ಳ ವಿಭ್ರಾಂತಿಯನ್ನೂ ಉಸುರಿನೊಂದಿಗೆ ಕೂಡಿದ ಮರಣವನ್ನೂ ಅನುಭವಿಸುತ್ತಾ ಇದ್ದೆನು. ನಾನು ತೋಟದೊಳಗೆ ಪ್ರವೇಶಿಸಲಾಗಿ, ಆಲಿಪ್ಯನು ಇಂಥ ಕ್ಲೇಶಾಕ್ರಾಂತ ಪಡುತ್ತಾ ಪ್ರಾಣಸ್ನೇಹಿತನನ್ನು ಬಿಟ್ಟು ಬಿಡ ಕೂಡದೆ ಬೆನ್ನಟ್ಟಿ ಬರಲಾಗಿ, ಇಬ್ಬರೂ ಮನೆಗೆದೂರವಾಗಿ ಕುಳಿತುಕೊಂಡೆವು. ನನ್ನ ಚಿಂತೆಯು ಕುದರದೆ, ಚಂಚಲದಿಂದ ತಪಿಸುತ್ತಾ, ನನಗೆ ಪ್ರೇರೇಪಕವಾಗಿದ್ದಂಥ ದೇವ ಚಿತ್ತಕ್ಕೆ ನಾನು ಕೈಯಿಕೊಟ್ಟು ಮನ ತಿರುಗದೆಯಿದ್ದ ಕಾರಣ, ನಾನು ನನ್ನೊಂದಿಗೆ ಉಗ್ರಕೋಪವ ಪಟ್ಟುಕೊಳ್ಳುತ್ತಿದ್ದೆನು. ಈ ಪ್ರಕಾರ ವ್ಯಾಧಿಷ್ಠನ ಮೇರೆಗೆ ವೇದನೆ ಪಟ್ಟು, ನನ್ನ ದುರ್ಗುಣಗಳ ಸಂಕೋಲೆಗಳು ಛಿನ್ನಾಭಿನ್ನ ಆಗುವ ಹಾಗೆ ಹೊರಳುತ್ತಾಯಿದ್ದೆನು. ಸರಪಣಿ ಸ್ವಲ್ಪವಿದ್ದಾಗ್ಯೂ ಕಟ್ಟಲ್ಪಡುತ್ತಾ ಇದ್ದೆನು. ಸ್ವಾಮೀ, ದೇವರವರು ನನ್ನ ಮೇಲೆ ಖಂಡಿತ ದಯವಾ

ಗಿದ್ದು, ನನಗೆ ಬುದ್ಧಿ ತೀಕ್ಷ್ಣವಾಗುವದಕ್ಕೆ ನನ್ನ ಅಂತ
ರ್ಯದೊಳು ಭಯವನ್ನೂ ನಾಚಿಕೆಯನ್ನೂ ಹುಟ್ಟಿಸಿ
ಡೆಬ್ಬೆಯ ಮೇಲೆ ಡೆಬ್ಬೆ ಹಾಕುತ್ತಾ ಇದ್ದಿರಿ. ಆದರೂ
ನಾನು ಪಟ್ಟು ಬಿಡದೆಯೂ, ತಿರಿಗಿ ಪಾಶಗಳಲ್ಲಿ ಶಿಕ್ಕಿ ಪು
ನರು ನನ್ನನ್ನು ಅಧಿಕ ಬಲದಿಂದ ಬಂಧಿಸುವದಕ್ಕೆ ಮನ
ಸ್ಸಿಲ್ಲದೆಯೂ, ಇಗೋ ತೀರುಮಾನ ಮಾಡುವೆನು, ಈಗ
ಳೇ ಬರುತ್ತೇನೆ, ಈ ಕ್ಷಣವೇ ಆಗಲಿ, ಎಂಬದಾಗಿ ನನ್ನೊ
ಳು ಹೇಳಿಕೊಂಡಾಗ್ಯೂ, ಪೂರ ಮಾಡಲೂ ಇಲ್ಲವೂ
ಬರಲೂ ಇಲ್ಲವೂ. ಆದರೆ ಹಿಂದಿನವುಗಳಿಗೆ ತಿರಿಗಿ
ಹೋಗಲಮ್ಮದೆ, ಸಮೀಪದಲ್ಲಿ ನಿಂತು ಅವುಗಳನ್ನು
ಹೇಸಿಕೊಂಡರೂ, ಸನ್ಮಾರ್ಗದಲ್ಲಿ ನಡೆಯುವೆನೆಂಬ
ಪಟ್ಟು ಹಿಡಿಯಲಾರದೆ ಇದ್ದೆನು. ಪಾಪದ ಮರಣಕ್ಕೆ ಸಾ
ಯುವದಕ್ಕೂ ಪುಣ್ಯದ ಜೀವಕ್ಕೆ ಬದುಕುವದಕ್ಕೂ ಅನು
ಮಾನಿಸಿಕೊಳ್ಳುತ್ತಾ ಇದ್ದೆನು, ಯಾಕೆಂದರೆ ನನ್ನಲ್ಲಿ
ಹೊಸದಾಗಿದ್ದ ನಿಮ್ಮ ಸ್ನೇಹವು ನನ್ನ ಹಳೇ ಅಭ್ಯಾ
ಸಗಳಿಗಿಂತ ಬಲ ಕಡಿಮೆಯಾಗಿತ್ತು. ನನ್ನ ಬಿಡುಗಡೆಯ
ದಿನವು ಎಷ್ಟು ಸಮೀಪಿಸುತ್ತಾ ಇತ್ತೋ, ಅದು ಬರುತ್ತೆ
ಎಂಬುವದಕ್ಕೆ ಅಷ್ಟು ಅಂಜಿಕೊಂಡಿದ್ದೆನು. ಅದು ಹ್ಯಾ
ಗಂದರೆ, ನನ್ನ ಬಾಲ್ಯದ ಭೋಗ ಅನುಭೋಗಗಳೂ
ವ್ಯರ್ಥ ಆಟಗಳೂ ನನ್ನ ಸೆರಗು ಹಿಡುಕೊಂಡು ಗುಣು
ಗುಣುಗುತ್ತಾ: ನಮ್ಮನ್ನು ಬಿಟ್ಟು ಬಿಡುತ್ತೀಯೋ? ಈಗ
ಲಿಂದ ಎಂದಿಗೂ ನಾವು ನಿನ್ನೊಂದಿಗೆ ಕೂಡ ಇರುವ
ದಿಲ್ಲವೋ? ಈ ಕ್ಷಣದಿಂದ ಒಂದು ದಿನಕ್ಕಾದರೂ ಇದು
ಅದು ಮಾಡಬಾರದೇ? ಎಂದು ಮೂಗ್ಗುತ್ತಾ ಇದ್ದವು.

ಆದಾಗ್ಯೂ ವಿರಕ್ತತ್ವವೆಂಬ ಪುಣ್ಯವಾದದ್ದು ಗುರುತ್ವದೊಂದಿಗೆ ರಂಸನ್ಮುಖವಾಗಿ ನನ್ನ ದೃಷ್ಟಿಸಿ ಹಾಸ್ಯವಾಗಿ ಕೇಳಿದ್ದೇನಂದರೆ: ವಿರಕ್ತಿಯುರಾದ ಕಳಂಕವಿಲ್ಲದ ಸುಕುಮಾರ ಕೊಮಾರ್ತಿಗಳನ್ನು ಸ್ತ್ರೀ ಪುರುಷರನ್ನು ಭಾವಿಸಿ ನೋಡು. ಅವರೂ ಇವರೂ ಮಾಡಿಕೊಂಡು ಬಂದದ್ದು ನಿನ್ನಿಂದಲಾಗದೆ ಹೋಗುವದೋ? ಆದರೆ ಅವರೂ ಇವರೂ ತಮ್ಮಿಂದ ವಿರಕ್ತರಾದರೋ? ತಮ್ಮ ದೇವರಿಂದಲವರಿಗೆ ತ್ರಾಣಿ ಬರಲಿಲ್ಲವೋ? ನೀನು ನಿನ್ನಲ್ಲಿ ನಂಬಿ ನಿನ್ನ ಶಕ್ತಿಯು ನಚ್ಚಿಕೊಳ್ಳ ಬೇಡ: ದೇವರಿಗೆ ನಿನ್ನನ್ನು ಒಪ್ಪಿಸಿಬಿಡು; ನೀನು ಬೀಳುವಂತೆ ತಪ್ಪಿಸಿಕೊಳ್ಳಲಾರರು. ನೀನು ಭರವಸದೊಂದಿಗೆ ದೇವವಶದಲ್ಲಿ ಬೀಳು, ನಿನ್ನನ್ನು ಕೈಕೊಂಡು ರಕ್ಷಿಸುವರು, ಎಂತ ದಯದೊಂದಿಗೆ ಸೂಚಿಸುತ್ತಾ ಇತ್ತು. ನಾನೋ ಅಂದರೆ, ನನ್ನ ಅಪ್ರಯೋಜಕವಾದ ಆಶಾಪಾಶಗಳ ನಿಗ್ರಹಿಸಿ ಬಿಡುವದಕ್ಕೆ ಅನುಮಾನಿಸಿ ಸುಸ್ತಿ ಮಾಡುತ್ತಿದ್ದೆನೆಂಬ ಕಾರಣ ನಾಚಿಕೊಂಡು ಲಜ್ಜಿತನಾಗಿದ್ದೆನು. ಇಂಥ ಮನೋವ್ಯಥೆ ಚಿಂತಾಕ್ರಾಂತದೊಳು ನಾನು ನನ್ನೊಂದಿಗೆ ವ್ಯಾಜ್ಯ ಆಡಿಕೊಂಡಿರುವಾಗ, ಆಲಿಪ್ಯುಸೆಂಬ ನನ್ನ ಸ್ನೇಹಿತನು ಸಮೀಪ ಇದ್ದುಕೊಂಡು ಇಂಥ ಮನೋ ಕಳವಳ ಯಾವಾಗ ತೀರುವದೋ ಮೌನವಾಗಿ ದೃಷ್ಟಿಸುತ್ತಾ ಇದ್ದನು.

ಹಾಗಿರುವಾಗ ಅಗುಸ್ತೀನೆಂಬವರು ತಮ್ಮ ಅನರ್ಥ ತಮ್ಮ ಪಾಪಗಳ ವಿಕಾರ ಅವಲಕ್ಷಣ ಕಡೇಕ ಧ್ಯಾನದಲ್ಲಿ ಯೋಚಿಸುತ್ತಾ, ಅತ್ಯಂತ ದುಃಖದಿಂದ ದೊಡ್ಡ ಮಳೆ ಉಗಿಯುವದೋಪಾದಿ ಕಣ್ಣೀರು ಜಲ ಪ್ರಳಯದ ಹಾಗೆ

ಬರುತ್ತೆಯೆಂದು ತಿಳಿದು, ಏಕಾಂತ ಬೇಕೆಂದು ಆಲಿಪ್ಯುಸ
ನನ್ನು ಬಿಟ್ಟು ದೂರ ಹೋಗಿ, ಒಂದು ಅಂಜೂರ ವೃ
ಕ್ಷದ ಕೆಳಗೆ ಉದ್ದ ಬಿದ್ದು, ಕಣ್ಣೀರು ಧಾರೆಯಾಗಿ ಸುರಿ
ಸುತ್ತಾ: ಸ್ವಾಮೀ, ಎಷ್ಟು ಪರಿಯಂತ ನನ್ನ ಮೇಲೆ
ಕೋಪ ಮಾಡುವಿರಿ? ನನ್ನ ಪೂರ್ವ ಪಾಪಗಳ ಸ್ಮರಿಸಿಕೊಳ್ಳ
ಬೇಡಿ, ಎಂಬದಾಗಿ ಆಕ್ರಂದಿಸಿದರು. ತರುವಾಯ ಇನ್ನ
ಪಾಪವ ಬಿಡ ಮನದೊಳು ಅನುಮಾನಿಸಿ ತತ್ತಳಿಸಿ ಕೊಂಡಿದ್ದ
ಕಾರಣ ತನ್ನ ಮೇಲೆ ರೋಷಗೊಂಡು, ನಾಳೆ ನಾಳೆಗೆ
ಯೆಂದು ಎಷ್ಟು ತನಕ ಕೇಳುವೆನು? ಯಾಕೆ ಇಂದು
ತಾನೇ ಅನ್ನುವದಿಲ್ಲ? ಈ ಕ್ಷಣದಲ್ಲಿಯೇ ಯಾಕೆ ನನ್ನ
ಅವಲಕ್ಷಣಗಳಿಗೆ ಅಂತ್ಯ ಮಾಡೆನು? ಅಂದುಕೊಂಡು,
ಅತಿ ದುಃಖದೊಂದಿಗೂ ಮನೋಕ್ಲೇಶದೊಂದಿಗೂ ಅಳು
ತ್ತಾಯಿರುವಾಗ, ನೆರೆಮನೆಯಿಂದ: ತೆಗದುಕೊಂಡು ಓದು,
ತೆಗದು ಕೊಂಡು ಓದು, ಎಂಬ ಶಬ್ದವ ಕೇಳಿದರು. ಆಗ
ಬೇರೆ ಮುಖವ ಧರಿಸಿಕೊಂಡು, ಚಿಕ್ಕವರು ಆಡುವಾಗ
ಇಂಥ ಪದ್ಯವ ಪಾಡುವದುಂಟೋ ಎಂತ ವಿಚಾರಿಸಿದರೆ,
ಎಂದಿನಲ್ಲಿ ಕೇಳಲಿಲ್ಲವಾದದರಿಂದ, ಸ್ವಾಮಿಯು ಕಡೆಯಿಂದ
ತನಗೆ ಪ್ರಾಪ್ತಿಸಿದ ಬುದ್ಧಿ ಎಂದರಿತು, ಕಣ್ಣೀರು ನಿಲ್ಲಿಸಿ ಎದ್ದು,
ಆಲಿಪ್ಯುಸನ ಹತ್ರಕ್ಕೆ ಬಂದು, ತಾನು ಇಟ್ಟಿದ್ದ ಅಪೋಸ್ತಲರ
ಪುಸ್ತಕವ ತೆಗದುಕೊಂಡು ತೆರದು, ಏಕಾಂತವಾಗಿ, ಮಾತಾ
ಡದೆ, ತನ್ನ ಕಣ್ಣಿಗೆ ದೊರಕಿದ ಮೊದಲನೇ ಸ್ಥಳವನ್ನು ಓದಿ
ದರು. ಏನಂದರೆ: ಭೋಜನಾದಿಗಳಲ್ಲಿಯೂ ಸುರಾಪಾನಾ
ದಿಗಳಲ್ಲಿಯೂ ಅಲ್ಲ; ಕಾಮ ಕ್ರೀಡೆಗಳಲ್ಲಿಯೂ ಮೋಹಾ
ತುರದಲ್ಲಿಯೂ ಅಲ್ಲ; ಜಗಳದಲ್ಲಿಯೂ ಅಲ್ಲ; ಪೋಟಾ

ಪೋಟಿಕತನದಲ್ಲಿಯೂ ಜೀವದ ಕಾಲವ ಕಳೆಯ ಬೇಡಿರಿ; ಆದರೆ ಜೇಸುನಾಥರನ್ನು ಹೊದ್ದು ಧರಿಸಿಕೊಳ್ಳಿರಿ. ನಿಮ್ಮ ಶರೀರದ ಪರಾಮರಿಕೆ ವಿಷಾಪೇಕ್ಷೆಗಳಲ್ಲಿ ಇಡದೆ ಇರ್ರಿ, ಎಂಬ ವಾಕ್ಯವನ್ನು ಓದಿ ಆಚೆ ಓದಲಿಲ್ಲ, ಓದಲೂ ಕೆಲಸವಿಲ್ಲವು: ಕಡೇ ಮಾತು ಓದುತ್ತಲೇ, ಅವರ ಹೃದಯದೊಳು ನಂಬಿಕೆಯ ಜ್ಯೋತಿ ಪ್ರಕಾಶಿಸಲಾಗಿ, ಸಕಲ ಸಂದೇಹದ ಕತ್ತಲೆ ನೀಗಿ ಹೋಯಿತು.

ಈ ಪ್ರಕಾರದಲ್ಲಿಯೂ ಆಶ್ಚರ್ಯ. ಇಗ್ನಾಸಿಯೆಂಬವರಿಗೂ ಮತ್ತನೇಕರಿಗೂ ಸತ್ಯ ಪುಸ್ತಕಗಳಿಂದ ಮೋಕ್ಷದ್ವಾರವು ತೆರೆಯಲ್ಪಟ್ಟಿತು. ನೀನು ನಿತ್ಯವು ಯಾವದೊಂದು ಜ್ಞಾನ ಪುಸ್ತಕವ ಓದುತ್ತೀಯೋ? ಅಲ್ಲವೇ ಕೇಳುತ್ತೀಯೋ? ಓದಲಿಕ್ಕಿಂತ ಮುಂಚೆ ಸ್ವಾಮಿಯನ್ನು ಬೇಡಿಕೊಳ್ಳುತ್ತೀಯೋ? ನಿನ್ನ ಆತ್ಮದಲ್ಲಿ ಜ್ಞಾನ ಬೆಳಕು ಪ್ರಕಾಶಿಸುವಂತೆ, ಪರಾಕಿಲ್ಲದೆ, ಸರ್ವೇಶ್ವರನು ನಿನ್ನೊಳು ಬುದ್ಧಿ ಹೇಳಿದ ಮೇರೆಗೂ ದಿವ್ಯ ವಾಕ್ಯದ ಸಾರ ಪಾನ ಮಾಡುವ ಮೇರೆಗೂ ಓದುತ್ತೀಯೋ? ಓದಿದ ಮೇಲೆ ಮರೆಯದ ಹಾಗೆ ಎಚ್ಚರಿಕೆಯಾಗಿದ್ಧೀಯೋ? ನಿನಗೆ ತಿಳಿದ ದಾರಿಯೊಳು ನೀನು ನಡೆಯುತ್ತೀಯೋ? ನಡೆಯುವದಕ್ಕೆ ಸ್ವಾಮಿಯನ್ನು ಬೇಡಿಕೊಳ್ಳುತ್ತೀಯೋ? ಸುಜ್ಞಾನ ಸುಬುದ್ಧಿಯನ್ನು ಅಸಡ್ಡೆ ಮಾಡುತ್ತೀಯೋ? ಸನ್ಮಾರ್ಗ ತಿಳಿದು ನೋಡಿ ಸಮ್ಮತಿಸಿ ದುರ್ಮಾರ್ಗದಲ್ಲಿ ನಡೆಯುತ್ತೀಯೋ? ವಿನೋದ ನೋಡಬೇಕೆಂದು ಮಾತ್ರ ಓದುತ್ತೀಯೋ? ಈ ಪ್ರಕಾರ ಮಾಡಿದರೆ ವ್ಯರ್ಥ ನಿಷ್ಫಲವೇ ಸರಿ. ಅಜ್ಞಾನರ ಪತಿತರ ಪ್ರಬಂಧಗಳು ಪುರಾಣ ಈ ಮುಂತಾದ ಪುಸ್ತಕಗಳ

ನ್ನು ಅಪ್ಪಣೆ ಇಲ್ಲದೆ ಓದ ಕೂಡದು; ಓದಿದರೆ ಅಜ್ಞಾನಾಂಧಕಾರ ಮುಚ್ಚುವದು. ಕೆಟ್ಟ ಪುಸ್ತಕಗಳ ಪಾಠದಿಂದ ಆತ್ಮಕ್ಕೆ ಶೈಖ್ಖವಿಲ್ಲದ ಮಾಯಾತಂತ್ರ ಮುಂತಾದ ಮೋಸಗಳು ಸಂಭವಿಸುವದುಂಟಾದ ಕಾರಣ, ಅವುಗಳನ್ನು ಎಂದಿಗಾದರೂ ಓದಲೂ ಆಗದು ತನ್ನ ವಶದಲ್ಲಿ ಇಟ್ಟುಕೊಳ್ಳಲೂ ಆಗದು.

ಸತ್ಯ ಗುರುಗಳ ಜ್ಞಾನ ಪ್ರಸಂಗಗಳಿಂದಲೂ ಸಹಾ ಸರ್ವೇಶ್ವರನು ತಮ್ಮ ಚಿತ್ತವನ್ನು ತಿಳಿಯ ಪಡಿಸುತ್ತಾರೆ. ದೇವವಾಕ್ಯ ಕೇಳಿದಂತೆ ಅವುಗಳ ಕೇಳ ಬೇಕು. ದೇವವಾಕ್ಯವಾದದ್ದು ಬೀಜವಾಗಿಧೆ. ಸತ್ಯ ಗುರುಗಳ ಮುಖಾಂತ್ರವಾಗಿ ಬಿತ್ತಿಸಿದವರು ದೇವರೇ; ಆತ್ಮವು ಭೂಮಿಯಾಗಿರಬೇಕು. ಬರೇ ಭೂಮಿಯಲ್ಲಿಯಾದರೂ ಬಂಡೆಯ ಮೇಲಾದರೂ ದಾರಿಯೊಳಗಾದರೂ ಮುಳ್ಳುಗಳಲ್ಲಾದರೂ ಬೀಜವು ಬಿದ್ದರೆ ಬೆಳೆಯುವದಿಲ್ಲವಲ್ಲ. ಈ ಪ್ರಕಾರವಾಗಿ ರಂದವಿಲ್ಲದ ಮನಸ್ಸುಳ್ಳದ್ದೂ ಮೂರ್ಖತ್ವದಿಂದ ಬಂಡೆ ಮೇರೆಗೆ ಆದದ್ದೂ ಮುಳ್ಳುಗಳೆಂಬ ವಿಷಾಪೇಕ್ಷೆಯುಳ್ಳದ್ದೂ ಆಗಿರುವ ಆತ್ಮದಲ್ಲಿ ಬೀಜವೆಂಬ ದಿವ್ಯ ವಾಕ್ಯವು ಬಿದ್ದರೆ, ಫಲಿಸುವದಿಲ್ಲ. ಸುಮ್ಮನೆ ಸತ್ಯ ಪ್ರಸಂಗಗಳ ಕೇಳಿ ಮನಸ್ಸಿನೊಳಿರಿಸದೆ, ನಿನ್ನ ದುರ್ಬುದ್ಧಿ ಬಿಡದೆ ಯಾವಾಗಿನ ಮೇರೆಗೆ ನಡೆದರೆ, ಅಮೃತವು ನಿನಗೆ ವಿಷವಾಗುತ್ತೆ. ಗುಡಿಗೆ ಬಂದು ಪ್ರಸಂಗ ಕೇಳದ ಮುಂಚೆ ಸಕಲ ವ್ಯಾಪಾರಗಳು ಬಿಟ್ಟು ಬಿಟ್ಟು, ಪರಾಕಿಲ್ಲದೆ ಕೇಳುವಂತೆ ಸ್ವಾಮಿಯನ್ನು ಬೇಡಿಕೊಂಡು, ಅಂಥ ದಿವ್ಯ ವಾಕ್ಯವು ನಿನ್ನಾತ್ಮದಲ್ಲಿ ಮೊಳೆಯ ಬೇಕೆಂತ, ಎಳೇ ಪೈರಿಗೆ ಒಕ್ಕಲಿಗರು ಮಳೆಯನ್ನು ಕೋರಿಕೊಳ್ಳುವ

೧ನೇ ಧ್ಯಾನ—ಸ್ವಾಮಿ ಪಟ್ಟ ಪಾಡುಗಳು ೧೬೭
ಮೇರೆಗೆ, ನೀನು ದಿವ್ಯ ಇಷ್ಟವು ನಿನ್ನ ಎಳೇ ಮನಸ್ಸಿನ ಮೇಲೆ ವರ್ಷಿಸ ಬೇಕೆಂತ ಎದುರು ನೋಡಿಕೋ. ನಿನಗೆ ತಿಳಿದ ಮಾರ್ಗವ ಧೈರ್ಯವಾಗಿ ಹಿಡಿದು, ಅಂಥ ಸತ್ಯ ಪ್ರಸಂಗಗಳಲ್ಲಿ ಕೇಳಿದ ಬುದ್ಧಿಗೆ ಅನುಸಾರವಾಗಿ ನಡೆಯುವೆನೆಂದು ಘಟ್ಟಿ ಪ್ರತಿಜ್ಞೆಯನ್ನು ಮಾಡಿಕೋ.

ಏಳನೇ ದಿವಸವು.

೧ನೇ ಧ್ಯಾನವು.

ಜೇಸುನಾಥಸ್ವಾಮಿ ಪಾಡು ಪಟ್ಟ ಕಷ್ಟಗಳ ಔಚಿತ್ಯಗಳನ್ನು ನೆನಸುವದು.

೧ನೇ ಆಯತ್ತವು. ಜ್ಞಾನದಿಂದ ಸ್ವಾಮಿಯನ್ನು ಕಷ್ಟಗಳಲ್ಲಿ ನಾವು ನೋಡಿಕೊಂಡಿರುವದು.

೨ನೇ ಆಯತ್ತವು. ಈ ಕಷ್ಟಗಳ ಅರ್ಥವನ್ನೂ ಫಲವನ್ನೂ ಹೊಂದುವ ಬಗ್ಯೆ ಸ್ವಾಮಿಯನ್ನು ಬೇಡಿಕೊಳ್ಳುವದು.

೧ನೇ ಯೋಚನೆ: ಪಾಡು ಪಟ್ಟವರು ಯಾರು?—ಕಳಂಕವಿಲ್ಲದ ಪರಿಶುದ್ಧವಾದ ಜೇಸುನಾಥಸ್ವಾಮಿ, ಮಟ್ಟಿಲ್ಲದ ಪವಿತ್ರತೆಯುಳ್ಳವರು, ದೇವಿಷ್ಟ ಪ್ರಸಾದ ರಾಶಿಯಾಗಿಯೂ ಸಂಪೂರ್ಣವಾಗಿಯೂ ಹೊಂದಿದವರು, ಶತೃಗಳಿಂದ ಸಹ ದೇವಕುಮಾರನೆಂತ ಅರಿತವರಾಗಿ ಸಕಲರಿಗೂ ಉಪಕಾರ ಮಾಡಿದ ಸ್ವಾಮಿಯು, ವ್ಯಾಧಿಷ್ಠರಿಗೆ ಗುಣ ಆರೋಗ್ಯ, ಅಂಧಕರಿಗೆ ದೃಷ್ಟಿ, ಬಧಿರರಿಗೆ ಶ್ರವಣ, ಸತ್ತವರಿಗೆ ಜೀವ

ಉದ್ಧರಿಸಿದವರು, ಅವರೇ ಪಾಡುಪಡುತ್ತಾರೆ. ಅಂಥ ಕಷ್ಟಗಳನ್ನು ಅನುಭವಿಸಲು ಪ್ರಾಪ್ತವಾಗದೆ, ಸಕಲ ಬಹುಮಾನ ಸಕಲ ವಂದನಾರ್ತಿಗಳಿಗೆ ಯೋಗ್ಯವಾದವರು ಪಾಡು ಪಡುತ್ತಾರೆ. ಮನುಷ್ಯರ ಮೇಲೆ ಪ್ರಿಯವುಳ್ಳವರೂ ನಮಗೆ ಪಿತನಾದವರೂ ಉಪಾಧ್ಯಾಯರೂ ಆತ್ಮ ವೈದ್ಯರೂ ರಕ್ಷಕರೂ ದಿವ್ಯ ಗುರುವಾದವರೂ ಸೃಷ್ಟಿ ಕರ್ತರೂ ಮೋಕ್ಷ ಪ್ರಭುವೂ ಆತ್ಮಗಳಿಗೆ ದಿವ್ಯಪುರುಷರೂ, ಇಂಥವರೇ ಪಾಡು ಪಡುತ್ತಾರೆ. ಕುಮಾರನು ತಂದೆಯು, ಹೆಂಡತಿ ಪುರುಷನ ಕಷ್ಟಗಳನ್ನೂ ಮರಣವನ್ನೂ ದುಃಖದೊಂದಿಗೆ ನೋಡ ಬೇಕಾದರೆ, ಜೇಸು ಕ್ರೀಸ್ತುವಿನ ಕಷ್ಟಗಳನ್ನೂ ಮರಣವನ್ನೂ ಯಾವ ಪ್ರಕಾರ ನಾನು ನೋಡ ಬೇಕಾಗಿರುವದು!

೨ನೇ ಯೋಚನೆ: ಎಂಥ ಪಾಡುಗಳ ಪಟ್ಟರೆಂತ ಧ್ಯಾನಿಸುವದು.—ಎರಡು ಬಗೆ ಕಷ್ಟಗಳನ್ನು ನಮ್ಮ ಕರ್ತರಾದ ಜೇಸುನಾಥಸ್ವಾಮಿ ಅನುಭವಿಸಿದರು. ಯಾವವೆಂದರೆ, ಹೊರಗೂ ಒಳಗೂ ಬಾಧಿಸಲ್ಪಟ್ಟರು. ತಾವು ಪಡ ಬೇಕಾಗಿದ್ದ ಪಾಡುಗಳನ್ನು ರಕ್ತವಾದ ಸ್ನಾನವೆಂದೂ ಹರಿಯೋದ ಪಾತ್ರೆಯೆಂದೂ ಸೂಚಿಸಿದರೂ.

೧ನೇದು. ಬಹಿರಂಗದಲ್ಲಿ ಸಕಲ ವಿಧ ಕಷ್ಟಗಳನ್ನು ಹೊಂದಿದರು.—೧. ಅವರು ವಸ್ತ್ರವಿಲ್ಲದೆ ನಿರ್ವಾಣವಾಗಿ ಶಿಲುಬೆಯಲ್ಲಿ ಜಡಿಯಲ್ಪಡಲು, ಅವರನ್ನು ಕೊಂದ ನಿಷ್ಠುರರು ತಮ್ಮೊಳಗೆ ಸ್ವಾಮಿಯ ಉಡುಪನ್ನು ಹಂಚಿಕೊಂಡರು.—೨. ಬಹುಮಾನದಲ್ಲಿ. ನೆನಸಬಾರದ ಅಪಮಾನವ ಅವರಿಗೆ ಮಾಡಿದರು.—3. ಕೀರ್ತಿಯಲ್ಲಿ. ಆತನ

ಪುಣ್ಯ ಡಂಭವೆಂತಲೂ, ಆತನನ್ನು ಪಾಪಾತ್ಮನೆಂತಲೂ ಪಿಶಾಚಿಯೆಂತಲೂ ತಂತ್ರಗಾರನೆಂತಲೂ ದ್ರೋಹಿಯೆಂತಲೂ ಕರೆದರು.—೪. ಜ್ಞಾನದಲ್ಲಿ. ಅಜ್ಞಾನಿಯೆಂತಲೂ ಪೈತ್ಯಗಾರನೆಂತಲೂ ಮಾಡಿದರು.—೫. ಅದ್ಭುತಗಳಲ್ಲಿ. ಶೂನ್ಯಗಾರನೆಂತಲೂ ಪಿಶಾಚಿಯ ಸೇವಕನೆಂತಲೂ ದೂಷಿಸಿದರೂ.—೬. ಶರೀರದಲ್ಲಿ. ಕಷ್ಟಗಳೆಷ್ಟು! ಶತೃಗಳ ನಿಷ್ಠುರದಿಂದಲೂ ಅವರ ಶರೀರ ಮೃದುತ್ವದಿಂದಲೂ ಎಷ್ಟೆಂದು ಹೇಳ ಬಹುದು.—೭. ಸ್ನೇಹಿತರಲ್ಲಿ ಎಷ್ಟು ಪಾಡು ಪಟ್ಟರು! ಒಬ್ಬನು ದ್ರೋಹವ ಮಾಡಿ ಅವರನ್ನು ತೋರಿಸಿ ಕೊಟ್ಟನು; ಒಬ್ಬನು ಅರಿಯೆನೆಂದು ಮೂರಾವರ್ತಿ ಹೇಳಿದನು; ಮಿಕ್ಕವರೆಲ್ಲರೂ ಕೈಬಿಟ್ಟು ಓಡಿ ಹೋದರು. ತನ್ನ ದಿವ್ಯ ಮಾತೆಯನ್ನು ನೋಡುವಾಗ ದುಃಖವೆಷ್ಟು! ಇದೆಲ್ಲ ಕೂಡಿದ ಮಾತ್ರ ಧ್ಯಾನಿಸುವದು.—೮. ಪಂಚೇಂದ್ರಿಯಗಳಲ್ಲಿ ಎಷ್ಟು! ಕಣ್ಣಾರ ಹಂಗಿಸುತ್ತಾ ದೂಷಿಸುತ್ತಾ ಹಾಸ್ಯ ಮಾಡುತ್ತಾ ಇದ್ದವರನ್ನು ನೋಡುವದು ದುಃಖವೆಷ್ಟು! ತನ್ನ ಭಕ್ತರ ಕಣ್ಣೀರು ಪ್ರಲಾಪವನ್ನು ನೋಡುವದು ಎಷ್ಟು ಬಾಧೆ! ಅದಲ್ಲದೆ ಉಗುಳಿನಿಂದಲೂ ಸಿರಸ್ಸಿನಿಂದ ಸುರಿದ ರಕ್ತದಿಂದಲೂ ತನ್ನ ಬಾಷ್ಪಗಳಿಂದಲೂ ಕಣ್ಣುಗಳಿಗೆ ಆದ ಕಷ್ಟ ಧ್ಯಾನಿಸುವದು. ಶ್ರೋತ್ರಗಳನ್ನು ತಿವಿದ ಛಾಡಿ ಸುಳ್ಳುಸಾಕ್ಷಿ ಸ್ವಾಮಿಯ ಮೇಲೆ ದ್ರೋಹ ಮಾತುಗಳಿಂದ ಬಾಧೆ ಎಷ್ಟು! ಅತ್ಯಂತ ದಾಹದಲ್ಲಿ ಶತೃಗಳು ಕುಡಿಸಿದ ವಿಷದಿಂದ ಜಿಹ್ವೆ ಕಷ್ಟವೆಷ್ಟು! ಶರೀರದ ಸರ್ವಾಂಗಗಳಲ್ಲಿ ಪೆಟ್ಟುಗಳಿಂದಲೂ ಮೊಳೆಗಳಿಂದಲೂ ಮುಳ್ಳುಗಳಿಂದಲೂ ಬಾಧೆ ಎಷ್ಟು! ಹೀಗೆ ಸರ್ವಾಂಗಗಳ ಪ್ರತ್ಯೇಕ ಪ್ರತ್ಯೇ

ಕವಾಗಿ ಧ್ಯಾನಿಸಿ, ಒಂದೂ ಮರೆಯದೆ, ಬಾಧೆಗಳೆಲ್ಲ ಭಕ್ತಿಯೊಂದಿಗೂ ದುಃಖದೊಂದಿಗೂ ನೋಡಿಕೊಂಡು ವಿಚಾರಿಸುವದು.

೨ನೇದು. ಆತ್ಮದ ಕಷ್ಟಗಳು ಶರೀರದ ಕಷ್ಟಗಳಿಗಿಂತ ಘನವಾದ ಕಷ್ಟಗಳಾದ್ದರಿಂದ ಅತಿ ಭಕ್ತಿಯೊಂದಿಗೆ ಧ್ಯಾನಿಸಬೇಕು. ಆದರೆ ಅಂಥ ದುಃಖ ತಿಳಿಯುವ ಬಗ್ಯೆ ಸ್ವಾಮಿಯ ಅನುಗ್ರಹವು ಬೇಕು. ಅವರ ದುಃಖವು ಸಮುದ್ರಕ್ಕಿಂತ ವಿಸ್ತಾರವಾದ ದುಖ್ಖವು. ಆ ಮನಸ್ತಾಪವು ಎಷ್ಟಾಗಿತ್ತೆಂದರೆ, ಸಕಲ ಪಾಪ ದ್ರೋಹಗಳನ್ನು ಪರಿಹರಿಸುವ ಬಗ್ಯೆ ಅಷ್ಟಾಗಿತ್ತು. ಇನ್ನು ಸಹಸ್ರ ಲೋಕಗಳಿದ್ದಾಗ್ಯೂ, ಆ ಲೋಕಗಳ ಪಾಪಗಳೆಲ್ಲ ವಿಮೋಚನೆ ಮಾಡ ಬೇಕಾದರೆ, ನಮ್ಮ ಕರ್ತರ ಕಷ್ಟಗಳಿಂದ ಸಂಪೂರ್ಣ ವಿಮೋಚನೆಯಾಗುವದು. ನಮ್ಮ ಪಾಪಗಳನ್ನು ಅಳುವದಕ್ಕೆ ಕಣ್ಣೀರು ಸಾಲದ ಕಾರಣ, ಜೇಸುನಾಥಸ್ವಾಮಿ ರಕ್ತವ ಬೆವರುವ ಮಟ್ಟಿಗೆ ದುಖ್ಖಾಗ್ಯೆದು ಅತ್ತರು. ನಮ್ಮ ಪಾಪಗಳಿಗಾಗಿ ಜೇಸುನಾಥಸ್ವಾಮಿ ಪಟ್ಟ ಮನಸ್ತಾಪವ ಧ್ಯಾನಿಸುವಾಗ ನಾನು ನನ್ನ ಪಾಪಗಳಿಗಾಗಿ ಎಲ್ಲರಕ್ಕಿಂತ ದುಖ್ಖಪಡುವದು ನ್ಯಾಯವೇ.

3ನೇ ಯೋಚನೆ: ಯಾರಿಂದ ಜೇಸುನಾಥಸ್ವಾಮಿ ಪಾಡುಪಟ್ಟರೆಂತ ವಿಚಾರಿಸುವದು.—ಯೂದರಿಂದಲೂ ಅಜ್ಞಾನ ಜನರಿಂದಲೂ ನಮ್ಮ ಕರ್ತರು ನಿರ್ಬಂಧವನ್ನು ಅನುಭವಿಸಿದರು. ಜೇಸುನಾಥ ಸ್ವಾಮಿಯನ್ನು ಕೊಲ್ಲುವದಕ್ಕೆ ಗುರುಗಳೂ ಧೊರೆಗಳೂ ಪ್ರಜೆಗಳೂ ಕೂಡಿದರೆಂದು ದೂರದೃಷ್ಟಿಯಿಂದ ದಾವೀದೆಂಬ ರಾಯರು ಪಾಲಿಸಿದರು. ಆದರೆ ಜೇಸುನಾಥಸ್ವಾಮಿ ಇವರಿಗೆ ಯಾವ ಉಪಹತಿ

మాడదె సకల ఉపకారగళన్నూ వరగళన్నూ పాలిసుత్తిరలాగి స్వామియన్ను శిలుబెయల్లి జడిదరు. క్రోధమదగర్వ మత్సర నానా విషాపేక్షెగళ ప్రేరేపకత్వదింద స్వామియ మేలె నిష్ఠూర మాడిదరు. కెలవరు తమగె తోళిద బుద్ధి కేళలొల్లదె, కెలవరు కోపిసికొండు, కెలవరు డంభ జ్ఞానదింద స్వామియ మేలె కలహ హుట్టిసిదంథవరు, పిశాచిగళే. పిశాచియు జూదాసనెంబ ద్రోహియన్ను తన్న వశవర్తియాగ మాడికొండు, స్వామియన్ను తోరిసి కొడెంత మనస్సినల్లి ప్రేరేపిసితు. అదల్లదె హంగియవర మనదొళిద్ద ద్రోహవన్నూ కోపవన్నూ జేసునాథస్వామి నోడిరలాగి అధిక కష్టగళన్ను అనుభవిసుత్తిద్దరు.

౨నే యోచనె: యారిగాగి పాడుపట్టరు ఎంత విచారిసువదు.—మనుష్యరెల్లరన్ను రక్షిస బేకెంతలూ, సర్వేశ్వరనిగె మనుష్యర మేలిద్ద కోపాగ్నియన్ను శాంతిమాడి దేవ మహిమె ఉద్ధరిస బేకెంతలూ, తరుణోపాయవన్నూ మోక్ష సేరువ బగెయన్నూ ఉచితవాద వరగళన్నూ తరబేకెంతలూ, మోక్షమార్గవ తోరిస బేకెంతలూ, మోక్షద ద్వార తెరెయ బేకెంతలూ, జేసునాథస్వామి తమ్మ అమూల్యవాద రక్తవ నమ్మ మితియిల్లద ద్రోహంగళిగె పరిహారార్థవాగి నమగె దయ మాడిదరు. ఒందు బొట్టు రక్తవు తమ్మ మితియిల్లద పుణ్య ఫలవు దివ్య

ಮಂದಿತ್ವದಿಂದ ಸಕಲ ಪಾಪಗಳನ್ನು ನಿವಾರಣೆ ಮಾಡುವ
ದಕ್ಕೆ ಸಾಕಾದರೂ, ನಮ್ಮ ರಕ್ಷಣ್ಯವು ಸಂಪೂರ್ಣವಾಗು
ವಂತೆ ರಕ್ತವಾದ್ಯಂತವನ್ನು ಸುರಿಸಿ ಕೊಟ್ಟರು. ಇಂಥ ಅವು
ಷಧದ ಮಹಿಮೆಯಿಂದ ನಮ್ಮ ವ್ಯಾಧಿ ಎಷ್ಟೆಂತ ತಿಳಿಸಿದರು.
ಶತ್ರುಗಳಿಗಾಗಿಯೂ ತಮ್ಮನ್ನು ಶಿಲುಬೆಯಲ್ಲಿ ಜಡಿದವರಿಗಾ
ಗಿಯೂ ಪಾಡು ಪಟ್ಟರು. ಎಲ್ಲರಿಗೋಸ್ಕರ ಹುದುವಾಗಿ
ಪಾಡು ಪಟ್ಟಿದ್ದಾಗ್ಯೂ ಒಬ್ಬೊಬ್ಬರಿಗೋಸ್ಕರ ಪ್ರತ್ಯೇಕ
ಪ್ರತ್ಯೇಕವಾಗಿ ಪಿತನಾದ ಸರ್ವೇಶ್ವರನಿಗೆ ತಮ್ಮ ದಿವ್ಯ ಪ್ರಾ
ಣವನ್ನು ಒಪ್ಪಿಸಿದರು. ಆದದರಿಂದ ಅರ್ಚ್ಯ. ಚಿನ್ನಪ್ಪನ
ವರೊಂದಿಗೆ ಒಬ್ಬೊಬ್ಬನು ಜೇಸುನಾಥಸ್ವಾಮಿ ನನ್ನನ್ನು
ಸ್ನೇಹಿಸಿ ನನಗಾಗಿ ತಮ್ಮ ಪ್ರಾಣವ ತಾವು ಒಪ್ಪಿಸಿದರೆಂತ
ಕೇಳ ತಕ್ಕದ್ದಾಗಿದೆ.

೫ನೇ ಯೋಚನೆ: ಯಾವ ತಾತ್ಪರ್ಯದೊಂದಿಗೆ ಜೇ
ಸುನಾಥಸ್ವಾಮಿ ಪಾಡು ಪಟ್ಟರೆಂದು ಧ್ಯಾನಿಸುವದು.—
ಮಹಾ ಅತಿಶಯವಾದ ಭಕ್ತಿಯಿಂದ ಜೇಸುನಾಥಸ್ವಾಮಿ
ಪಾಡುಪಟ್ಟರು; ಮತ್ತು ಕಷ್ಟಗಳ ಮೇಲೆ ಬಹು ಆಶೆಪಟ್ಟ
ರೆಂತ ಆತನ ದಿವ್ಯ ವಾಕ್ಯದಿಂದ ಪ್ರತ್ಯಕ್ಷವಾಗಿ ತಿಳಿಯ
ಲಾಗುತ್ತೆ. ಹ್ಯಾಗಂದರೆ: ನಾವು ಒಂದು ಸ್ನಾನ ಮಾಡ
ಬೇಕು; ಅಷ್ಟರೊಳಗೆ ಮಹಾ ಸಂಕಟ ಪಡುತ್ತಿದ್ದೇನೆಂದರು.
ಅಂಥ ಕಷ್ಟಗಳನ್ನು ದೃಢವಾಗಿ ನಿರೀಕ್ಷಿಸಿದ್ದಲ್ಲದೆ, ಅವು ಬರು
ವಾಗ ಮಹಾ ಸಂತೋಷದೊಂದಿಗೆ ಅಂಗೀಕರಿಸಿದರು.
ನಿಷ್ಠೂರರಾದ ಶತ್ರುಗಳು ತಮ್ಮ ಮನಸ್ಸಿನಲ್ಲಿ ಕೋರಿದ ಬಾಧೆ
ಗಳಿಗಿಂತ ಅಧಿಕವನುಭವಿಸುವದಕ್ಕೆ ಜೇಸುನಾಥಸ್ವಾಮಿ ತಾತ್ಪ
ರ್ಯವಾಗಿಯಿದ್ದರು.

೭ನೇ ಯೋಚನೆ: ಜೇಸುನಾಥಸ್ವಾಮಿಯು ಕಷ್ಟಗಳೊ
ಳಗೆ ಪ್ರಕಾಶಿಸಿದ ಪುಣ್ಯಗಳ್ಯಾವವೆಂದು ವಿಚಾರಿಸುವದು.—
ದಿವ್ಯ ಗುರುವಾದ ಜೇಸುನಾಥಸ್ವಾಮಿ ಸಕಲ ಪುಣ್ಯಗಳ
ಮಾರ್ಗವನ್ನು ತೋರಿಸ ನಿರ್ಣಯಿಸಿ, ಹುಟ್ಟಿದಾರಭ್ಯ
ದಿಂದ ಮರಣ ಪರಿಯಂತರಕ್ಕೂ ನಡತೆಯಿಂದಲೂ ವಾಕ್ಯ
ದಿಂದಲೂ ಕಡಿಮೆ ಬಾರದಂತೆ ಅದನ್ನು ಪಾಠೈಸಿದನಂ
ತರ, ಮರಣ ಸಮಯದಲ್ಲಿ ತಿರಿಗಿ ಸಂಕ್ಷೇಪವಾಗಿಯೂ
ಅತಿಶಯವಾಗಿಯೂ ಬೋಧಿಸಿದರು. ತಮ್ಮ ದಿವ್ಯ ಮರ
ಣದಿಂದ ನಮಗೆ ಸಕಲ ಪುಣ್ಯಗಳ ಮಾಡುವಾನುಗ್ರಹವನ್ನು
ಸಂಪಾದಿಸುತ್ತಾ ಇರಲಾಗಿ, ಆ ಪುಣ್ಯಗಳ ಸಾಧನೆಯನ್ನು
ಸಹಾ ಪಾಠೈಸಿದರು. ಅಂಥ ಪುಣ್ಯಗಳು ಆ ಪರಿವಿಗೆ
ಕತ್ತಲೆಯೂ ಮರೆಯೂ ಉಳ್ಳವಾಗಿ ಯಾರಿಂದಲಾದರೂ
ಮೆಚ್ಚಲ್ಪಡದೆ ಇದ್ದ ಕಾರಣ, ಜೇಸುನಾಥಸ್ವಾಮಿಯು ಎಲ್ಲರ
ಮುಂದೆ ಅವನ್ನು ನಡಿಸಿ ಪ್ರಸಿದ್ಧಿ ಮಾಡಿ, ಪ್ರಕಾಶಕ್ಕೆ ತಂ
ದರು. ಕಡೆಯಲ್ಲಿ ತಮ್ಮ ಚಿತ್ತವು ನಮಗೆ ಸ್ಪಷ್ಟವಾಗಿ ತಿಳಿ
ಯುವಂತೆ ಪುಣ್ಯಗಳೆಲ್ಲವನ್ನು ತಮ್ಮಲ್ಲಿ ತೋರಿಸಿದರು.
ಮನೋದರಿದ್ರವ ಪಾಠೈಸಿ ಕೇವಲ ನಿರಾದರಣೆಯಲ್ಲಿ ಮರಣ
ಹೊಂದಿದರಲ್ಲಾ? ಅವರಿಗೆದುರಾಗಿ ಭಂಟರು ಅವರ
ವಸ್ತ್ರಗಳನ್ನು ತಮ್ಮೊಳಗೆ ಹಂಚಿಕೊಂಡರು; ಅವರ ಅಂ
ಗಿಯ ಮೇಲೆ ಅದೃಷ್ಟದ ಚೀಟು ಹಾಕಿದರು. ದಾಕ್ಷಿ
ಣ್ಯವ ಪಾಠೈಸ ಬೇಕಾದರೆ ಪುಸ್ತಕ ಕೆಲಸವಿಲ್ಲವು: ಶಿಲು
ಬೆಯೊಳು ಜಡಿಯಲ್ಪಟ್ಟ ಸ್ವಾಮಿಯನ್ನು ನೋಡಿದರೆ
ಸಾಕು. ದಾವೀದೆಂಬ ದೀರ್ಘದರ್ಶಿಯಾದವರು ಪಾಲಿ
ಸಿದ ಮೇರೆಗೆ, ದೇವ ಸುತನಾದವರು ಮನುಷ್ಯರ ಅಪಕೀ

ರ್ತಿಯೂ ನೀಚರ ನಿಂದೆಯೂ ಮಾಡಲ್ಪಟ್ಟರು. ಅವರ ತಾಳ್ಮೆಯನ್ನು ಹೇಳುವಂಥವರ್ಯಾರು? ತಮ್ಮನ್ನು ಜಡಿದು ದೂಷಿಸಿ ಕೊಲೆ ಮಾಡಿದವರನ್ನು ಬೈಯ್ಯಲೂ ಇಲ್ಲವು, ಶಪಿಸಲೂ ಇಲ್ಲವು. ಕುರಿಮರಿಯಪ್ಪಂದ ಶಾಂತ ವಹಿಸಿ ಕೊಂಡು ಬಾಯಿತೆರೆಯದೆ ಮೌನವಾಗಿ ಇದ್ದರು. ಮರಣ ಹೊಂದುವ ಸಮಯದಲ್ಲಿ ತಾವು ಮಾಡಿದ ಪ್ರಥಮ ಮನವಿ ಯಾವದೆಂದರೆ: ಪಿತನೇ, ಮನ್ನಿಸಿರಿ; ಅರಿಯದೆ ಮಾಡುತ್ತಾರೆ, ಎಂತ ತಮ್ಮನ್ನು ಕೊಂದವರಿಗಾಗಿ ಮಹಾ ದಯವಾಗಿ ಬೇಡಿ ಕೊಂಡರು. ಯಾವ ಪುಣ್ಯವನ್ನು ಆಗ ಪಾಲೈಸದೆ ಹೋದರು? ಆದಾಗ್ಯೂ ಪ್ರತ್ಯೇಕವಾಗಿ ಶ್ರವಣ ಧರ್ಮವೆಂಬ ಪುಣ್ಯವ ಮಹಾ ಉಚಿತ ವಿಧವಾಗಿ ಪಾಲೈಸಿದರು. ಹೀಗಿರುವದರಿಂದ, ಇನ್ನು ಮೇಲೆ ಶಿಲುಬೆಯೇ ನನಗೆ ಪುಸ್ತಕವಾಗುವದು; ಇದನ್ನು ನಿತ್ಯ ಧ್ಯಾನಿಸಿ, ಬೇಕಾದ ವರಗಳು ಶಿಲುಬೆಯೊಳು ಜಡಿಯಲ್ಪಟ್ಟ ಸ್ವಾಮಿಯಿಂದ ನನಗೆ ಬರುವದೆಂತ ಘಟ್ಟಿಯಾಗಿ ನಂಬಿಕೊಂಡಿರುವೆನು.

೨ನೇ ಧ್ಯಾನವು.

ಜೇಸುನಾಥಸ್ವಾಮಿಯ ಕಷ್ಟಗಳನ್ನು ನೋಡಿ ಅಳುವದಕ್ಕೆ ಕಾರಣವೇನೆಂತ ಧ್ಯಾನಿಸುವದು.

೧ನೇ ಆಯತ್ತವು. ಜೇಸುನಾಥಸ್ವಾಮಿ ಶಿಲುಬೆ ಹೊತ್ತುಕೊಂಡು ಕಪಾಲ ಬೆಟ್ಟಕ್ಕೆ ಹೋಗುವಾಗ, ಪ್ರಜೆಗಳಲ್ಲಿ ಅನೇಕ ಪುಣ್ಯ ಸ್ತ್ರೀಯರು ಅಳುತ್ತಾ ಅಂಗಲಾರ್ಚುತ್ತಾ ಇರ

ಲಾಗಿ, ಜೀಸುನಾಥಸ್ವಾಮಿ ಅವರನ್ನು ನೋಡಿ: ಸ್ತ್ರೀಯರುಗಳಿರಾ, ನಮ್ಮ ನಿಮಿತ್ತ ಅಳದೆ ನಿಮ್ಮ ನಿಮಿತ್ತವಾಗಿಯೂ ನಿಮ್ಮ ಮಕ್ಕಳ ನಿಮಿತ್ತವಾಗಿಯೂ ಅತ್ತುಕೊಳ್ಳಿರಿ, ಎಂದು ಪಾಲಿಸಿದ ವಾಕ್ಯವ ನಿಧಾನಿಸುವದು.

೨ನೇ ಆಯತ್ತವು. ಜೀಸುನಾಥಸ್ವಾಮಿ ಕಟ್ಟಳೆ ಮಾಡಿದ ಮೇರೆಗೆ, ಅಳುವಿಕೆಯ ವರವನ್ನು ಸ್ವಾಮಿಯಿಂದ ಬೇಡಿ ಕೊಳ್ಳುವದು.

೧ನೇ ಯೋಚನೆ.—ಜೀಸುನಾಥಸ್ವಾಮಿಯ ಕಷ್ಟಗಳಿಗೆ ಪಾಪವು ಕಾರಣವಾದ್ದರಿಂದ, ಪಾಪಕ್ಕಾಗಿ ಎಲ್ಲರ್ಕಿಂತಲು ಅಳುವದು ನ್ಯಾಯವಾಗಿಧೆ. ಜೀಸುನಾಥಸ್ವಾಮಿ ಸಕಲರ ಪಾಪಗಳಿಗೋಸ್ಕರ ಪ್ರತ್ಯಕ್ಷವಾಗಿ ತಪಸ್ಸು ಮಾಡಿದರೆಂತ ನೆನಸುವದು. ತಪಸ್ಸಿನೊಳಗೆ ಎರಡು ವಿಶೇಷಗಳುಂಟು: ಯಾವವಂದರೆ, ಮನಸ್ತಾಪವೂ ಪ್ರಾಯಶ್ಚಿತ್ತವೂ. ಜೀಸುನಾಥಸ್ವಾಮಿ ತೋಪಿನಲ್ಲಿ ನಮ್ಮ ಪಾಪಗಳಿಗಾಗಿ ಮನಸ್ತಾಪಪಟ್ಟರು, ಕಪಾಲ ಬೆಟ್ಟದಲ್ಲಿ ಪ್ರಾಯಶ್ಚಿತ್ತವನ್ನು ತೀರಿಸಿದರು.

೧ನೇದು. ನಮ್ಮ ಪಾಪ ದ್ರೋಹಗಳೆಲ್ಲ ಜೀಸುನಾಥಸ್ವಾಮಿಯ ಮೇಲೆ ಪಿತನಾದ ಸರ್ವೇಶ್ವರನು ಹೊರಿಸಿದರೆಂತ ಇಸಾಯಾಸೆಂಬ ದೂರದೃಷ್ಟಿಯಾದವರು ಪಾಲಿಸಿದರು. ಆದ್ದರಿಂದ ನಮ್ಮ ಕರ್ತರು ತೋಪಿನೊಳಗೆ ಬಂದು ಭಯವೂ ದುಃಖವೂ ಅಸಹ್ಯವೂ ಮನಸ್ತಾಪವೂ ಈ ಮುಂತಾದದ್ದೆಲ್ಲವನ್ನು ಹೊಂದಿ, ಜಪವ ಮಾಡುವಾಗಲು ಜೀವ ಸಂಕಟ ಪಡಲಾಗಿ, ಶರೀರವಾದ್ಯಂತವೂ ರಕ್ತ ಬೆವರು ಬೆವರಿತು; ಯಾಕೆಂದರೆ ನಮ್ಮ ಪಾಪಗಳ ನಿಮಿತ್ತ ತಪಸ್ಸು ಮಾಡುತ್ತಾ ಇದ್ದರು. ಸಕಲ ಯುಗಾಂತ್ರಗಳಲ್ಲಿಯೂ ಸಕಲ

ರಾಜ್ಯಗಳಲ್ಲಿಯೂ ಉಂಟಾದ ಪಾಪಗಳು, ಪ್ರಜೆಗಳ ಪಾಪಗಳೂ ಗುರು ಶಿಷ್ಯರ ಪಾಪಗಳೂ ತಂದೆ ತಾಯಿಗಳ ಪಾಪಗಳೂ ಮಕ್ಕಳ ಪಾಪಗಳೂ ಮಹಾ ಘನವಾದ ದ್ರೋಹಂಗಳಲ್ಲವೂ ಕರ್ತರ ಪರಿಶುದ್ಧಾತ್ಮವನ್ನು ಸುತ್ತಿಕೊಳ್ಳುವಾಗ, ಶ್ವಾನಗಳೂ ಸಿಂಹಂಗಳೂ ಎಲ್ಲಾ ಕಡೆಯಲ್ಲಿ ಅವರನ್ನು ಸುತ್ತಿದ ಮೇರೆಗೂ, ಮರಣ ಸಂಕಟ ಬಂದದಾಗೂ, ಪಾಪ ದ್ರೋಹಂಗಳು ನದೀಪ್ರವಾಹವಾಗಿ ಪ್ರವಹಿಂಸುವದಾಗೂ, ಜೇಸುನಾಥಸ್ವಾಮಿ ತಮ್ಮ ಮೇಲೆ ಬಿದ್ದ ಸಕಲ ಪಾಪಗಳನ್ನು ಮಹಾ ಅಸಹ್ಯಹೊಂದಿಗೂ ಕೋಪಿಸಿಕೊಂಡಿಗೂ ಯೋಚಿಸಿ ನೋಡಿ, ಪರಿಹರಿಸ ಬೇಕೆಂತ ಅಪಾರ ದುಃಖ ಪಂಗೈದರು. ಈ ಮೇರೆಗೆ ನಾವು ತಪಸ್ಸು ಮಾಡುತ್ತೇವೋ, ಹೀಗೆ ಮನಸ್ತಾಪ ಪಡುತ್ತೇವೋ, ಅಳುತ್ತೇವೋ, ಎಂದು ಧ್ಯಾನಿಸುವದು.

೩ನೇದು. ಕಪಾಲ ಬೆಟ್ಟದ ಮೇಲೆ ಜೇಸುನಾಥಸ್ವಾಮಿ ಪಾಪಕ್ಕೆ ಬೇಕಾದ ಶಿಕ್ಷೆಯನ್ನು ತಮ್ಮ ದಿವ್ಯ ಶರೀರದಲ್ಲಿ ಅನುಭವಿಸಿದರು. ಜೇಸುನಾಥಸ್ವಾಮಿ ಪರಿಶುದ್ಧ ಪವಿತ್ರವುಳ್ಳವರಾಗಿರಲು, ಅವರಿಗೆ ಇಷ್ಟು ಶಿಕ್ಷೆಯಾಕೆ ಎಂದು ಆಶ್ಚರ್ಯ ಪಡುತ್ತೇವೆ. ಆದರೆ ಇಂಥ ಪವಿತ್ರರಾದವರು ಲೋಕದ ಪಾಪಗಳಿಗೆಲ್ಲಕೂ ಯಜ್ಞಬಲಿಯಾಗಿದ್ಧಾರಲ್ಲಾ? ಆದ ಕಾರಣ ಮಿತಿಯಿಲ್ಲದ ಪಾಪಗಳಿಗಾಗಿಯೂ ಮಿತಿಯಿಲ್ಲದ ದೋಷಗಳಿಗಾಗಿಯೂ ಮಿತಿಯಿಲ್ಲದ ಪ್ರಾಯಶ್ಚಿತ್ತವು ಬೇಕಾಗಿತ್ತು. ನಮ್ಮ ಪಾಪಗಳಿಗೋಸ್ಕರ ಮೊಳೆಗಳ ಹೊಡತಗಳೂ ಮುಳ್ಳಿನ ಕಿರೀಟವೂ ಶಿಲುಬೆಯೂ ಬೇಕಾಗಿದ್ದವು. ಪಾಪದ ರುಣ ತೀರಿಸುವದಕ್ಕೆ ಇಷ್ಟು ಪಾಡು ಪಡ ಚಿತ್ತವಾದರು.

ಅಪರಿಮಿತ ಪವಿತ್ರರೂ ನಮ್ಮ ಕರ್ತರೂ ಆದಂತ ಜೇಸುನಾಥಸ್ವಾಮಿ ಪರರ ಪಾಪ ನಿವಾರಣೆಗಾಗಿ ಇಂಥ ನಿರ್ಬಂಧ ಅನುಭವಿಸುವಲ್ಲಿ ಪಾಪಾತ್ಮರಾಗಿರುವಂಥ ನಾವು ನಮ್ಮ ಪಾಪಗಳಿಗಾಗಿ ತಪಸ್ಸು ಮಾಡದೆ ಇದ್ದರೆ ನ್ಯಾಯವೋ?

೨ನೇ ಯೋಚನೆ.—ಪಾಪದಿಂದ ಜೇಸುನಾಥಸ್ವಾಮಿ ಪಾಡು ಪಟ್ಟ ಕಷ್ಟಗಳನ್ನು ತಿರಿಗಿ ನೂತನವಾಗಿ ಪಾಪದಿಂದ ಅನುಭವಿಸುತ್ತಿದ್ದಾರೆಂತ ನೆನಸುವದು. ಅದು ಹ್ಯಾಗಂದರೆ, ಸ್ವಾಮಿಯ ಶಿಷ್ಯನೊಬ್ಬನು ದ್ರೋಹವ ಮಾಡಿ ಅವರನ್ನು ತೋರಿಸಿ ಕೊಟ್ಟನು; ಮಿಕ್ಕಾದವರು ಕೈ ಬಿಟ್ಟು ಓಡಿ ಹೋದರು; ಡಂಭ ಗುರುಗಳು ಬಂದುಕಟ್ಟು ಮಾಡಿ ಸ್ವಾಮಿಯ ಮೇಲೆ ಕಲಹವನ್ನೆಬ್ಬಿಸಿದರು; ಹೆರೋದೆಸೆಂಬ ರಾಯನೂ ಇವನ ಸಮುಖಸ್ಥರೂ ಸ್ವಾಮಿಯನ್ನು ಪೈತ್ಯಗಾರನಂತೆ ಎಣಿಸಿ, ಪರಿಹಾಚಕವ ಮಾಡಿ ತಳ್ಳಿ ಬಿಟ್ಟರು; ಬರಬ್ಬಾಸನೆಂಬ ಕಳ್ಳನು ಜೀವಿಸಲಿ, ಸ್ವಾಮಿಯನ್ನು ಕೊಲ್ಲಿರೆಂತ ಪ್ರಜೆಗಳು ಹಗೆಯಾಗಿ ಕೂಗಿದರು; ಮುಳ್ಳಿನ ಕಿರೀಟ ಶಿರಸ್ಸಿನ ಮೇಲೆ ಇಟ್ಟು ಅಮುಕಿ, ಕೈಯ್ಯಲ್ಲಿ ದಂಡೆ ಗೋಲು ಕೊಟ್ಟು, ಹಳೇ ಸಕಲಾತಿಯನ್ನು ಹೊದ್ದಿಸಿ, ಗೊಣುವೆಯುವರು ಪರಿಹಾಚಕವಾಗಿ ಸ್ವಾಮಿಗೆ ಅವಮಾನ ಮಾಡಿದರು; ನಿಷ್ಠೂರರು ದೊಡ್ಡ ಮೊಳೆಗಳಿಂದ ಸ್ವಾಮಿಯನ್ನು ಶಿಲುಬೆಯಲ್ಲಿ ಜಡಿದರು; ಇದು ನಮ್ಮ ಕರ್ತರ ಕಷ್ಟಾದಿಗಳ ಸಂಕ್ಷೇಪವಲ್ಲವೇ? ಇದೆಲ್ಲ ಪುನಃ ಪಾಪಾತ್ಮರಿಂದ ನಡೆಯುತ್ತೆ. ಸ್ವಾಮಿಗೆ ಶಿಷ್ಯರು ದ್ರೋಹವ ಮಾಡಿ ತೋರಿಸಿ ಕೊಟ್ಟರು, ಕೈ ಬಿಟ್ಟು ಓಡಿ ಹೋದರು. ಎಷ್ಟಾವರ್ತಿ ಕ್ರೀಸ್ತುವರು ಹಾಗೆಯೇ ದ್ರೋಹವ ಮಾಡಿ

ಸ್ವಾಮಿಯನ್ನು ತೋರಿಸಿ ಕೊಡುತ್ತಾರೆ! ಎಷ್ಟೋ ಮಂದಿ ಸ್ವಾಮಿಯನ್ನು ಬಿಟ್ಟು ಪತಿತರಾಗುತ್ತಾರೆ! ಎಷ್ಟೋ ಮಂದಿ ಸ್ವಾಮಿಯ ಪಾರ್ಶ್ವದಲ್ಲಿ ಯುದ್ಧರಂಗದೊಳು ನಿಲ್ಲ ಬೇಕಾದಾಗಲೇ ನಾಚಿಕೆ ಇಲ್ಲದೆ ಓಡಿಹೋಗುತ್ತಾರೆ! ಇದೇ ನನಗೆ ದುಃಖದ ಕಾರಣವಾಗಿರ ತಕ್ಕದ್ದು. ಡಂಭ ಗುರುಗಳು ಗುಲ್ಲು ಮಾಡಿ ಸ್ವಾಮಿಯ ಮೇಲೆ ಕಲಾಪವನ್ನೆಬ್ಬಿಸಿದರು. ಈಗಿನ ಕಾಲದಲ್ಲಿ ಲೌಕಿಕ ಗುರುಗಳು ಸ್ವಾಮಿಯ ಶಿಷ್ಯರ ಮೇಲೆ ಎಷ್ಟಾವರ್ತಿ ಗಲ್ಲತ್ತು ಮಾಡಿ ಕಲಹ ಹುಟ್ಟಿಸುತ್ತಾರೆ! ಸ್ವಾಮಿಯ ಮೇಲೆ ಹುಟ್ಟಿಸಿದ ಹಾಗಾಯಿತು. ಡಂಭ ಉಪದೇಶಿಗಳು ಸಹ ಸತ್ಯದ ಮೇಲೆಯೂ ಗುರುಗಳ ಮೇಲೆಯೂ ಕಲಹ ವಿರೋಧ ಎಬ್ಬಿಸುವದಿಲ್ಲವೇ? ಹೆರೋದೆಸೆಂಬ ರಾಯನ ಅರಮನೆಯೊಳು ಸ್ವಾಮಿಗೆ ಬಂದ ಅಪಕೀರ್ತಿ ಮಹಾ ದೊಡ್ಡ ಅಪಕೀರ್ತಿಯಲ್ಲವೇ? ಈಗಲಾದರೆ ಧೊರೆಗಳೂ ಅವರ ಸಮುಖಸ್ಥರೂ ಮತ್ತು ಆಸ್ತಿಯುಂಟಾದವರೂ ಸತ್ಯವ ಹಂಗಿಸಿ, ಉಪದೇಶವ ತೃಣೀಕರಿಸಿ, ಗುರುಗಳನ್ನು ನೀಚರಪ್ಪಂದ ನೋಡಿ, ನಮ್ಮ ಕರ್ತರಿಗೆ ಪರಿಹಾಸಕ ಮಾಡುತ್ತಾರಲ್ಲವೇ? ಅಂಥವರು ಸ್ವಾಮಿಯ ದರಿದ್ರ ದಾಕ್ಷಿಣ್ಯ ಕಷ್ಟಗಳನ್ನು ಸಡ್ಡೆ ಮಾಡುತ್ತಾರೋ? ಸ್ವಾಮಿಯ ಪುಣ್ಯವರಿಯುವರೋ? ಬರಬ್ಬಾಸನು ಬದುಕಲಿ, ಸ್ವಾಮಿಯನ್ನು ಕೊಲ್ಲಿರೆಂತ ಮೂಢರು ಹಂಗೆಯಿಂದ ಕೂಗಿದರಲ್ಲಾ? ಎಷ್ಟಾವರ್ತಿ ನಾವು ಸ್ವಾಮಿಗೆ ಇಂಥ ಅಪಮಾನವ ಮಾಡಿದೆವು! ಎಷ್ಟಾವರ್ತಿ, ಜೂದರುಗಳ ಹಾಗೆ, ಪಟ್ಟಣವೆಂಬ ನಮ್ಮ ಆತ್ಮದಲ್ಲಿ ಒಡ್ಡೋಲಗದೊಂದಿಗೆ ಅವರನ್ನು ಸತ್ ಪ್ರಸಾದದ ಮುಖಾಂತರವಾಗಿ ಕರೆಕೊಂಡ ತರು

ವಾಯ, ಸ್ವಾಮಿಗಿಂತ ಸುಖವನ್ನೂ ಸ್ವಾರ್ಥವನ್ನೂ ಕೋರಿದೆವು! ಎಷ್ಟಾವತ್ತೂ ಸ್ವಾಮಿಯ ಮೇಲೆ ಇರಿಸಿದ ಪಕ್ಷಕ್ಕಿಂತ ಸೃಷ್ಟಿಸಲ್ಪಟ್ಟ ವಸ್ತುಗಳ ಮೇಲೆ ಪಕ್ಷವಾಗಿದ್ದೆವು! ಈ ಕಡೇ ಭೋಗ, ಆ ಕಡೇ ದೇವರು, ಈ ಎರಡರಲ್ಲೊಂದಕ್ಕೆ ಸಂದೇಹ ಪಡುವಾಗ, ಜ್ಞಾನವು ಪಿಲಾತನ ಮೇರೆಗೆ ಉಭಯತ್ರರೊಳಗೆ ಯಾರು ಬೇಕೆಂದರೆ, ದುರಾಶೆಗಳು ಜಾದರ ಮೇರೆಗೆ ಮರಾ ವಿಪರೀತವಾಗಿ ಸುಖ ಬೇಕೆಂತ ಕೂಗಿದವು. ಅದಕ್ಕೆ ರಹಸ್ಯವಾಗಿ ಜ್ಞಾನವಾದದ್ದು: ನಿಮ್ಮ ದೇವರಿಗೆ ಏನು ಮಾಡಲಿ ಅಂದರೆ, ಅವರು ಶಿಲುಬೆಯೊಳು ಜಡಿಯಲ್ಪಡಲಿ; ನಮಗೆ ಸುಖ ಬೇಕು; ಸುಖಕ್ಕೆ ದೇವರು ಸಮ್ಮತಿಸದಿದ್ದರೆ, ಶಿಲುಬೆಯಲ್ಲಿ ಜಡಿಯಿರಿ, ಎಂತ, ಜಾದರು ಕೂಗಿದ ಹಾಗೆ, ನಮ್ಮ ದುರಾಶೆಗಳು ಕೂಗಿದಂತೆ ಇರಲಿಲ್ಲವೇ? ಸರ್ವೇಶ್ವರನ ನಿಜ ಕುಮಾರನಾಗಿರುವಂಥ ಜೇಸುನಾಥಸ್ವಾಮಿಗೆ ಪರಲೋಕ ನಿವಾಸಿಗಳೂ ಸಮ್ಮನಸ್ಸುಗಳೆಲ್ಲರೂ ಭಯ ಭಕ್ತಿ ವಿನಯದೊಂದಿಗೆ ಆರಾಧನೆ ಮಾಡುತ್ತಾರಲ್ಲ ? ಅಂಥ ಸ್ವಾಮಿಗೆ ಮುಳ್ಳಿನ ಕಿರೀಟವನ್ನಿಟ್ಟು ಅಮುಕಿ, ಬಿದುರು ಕೋಲನ್ನು ಕೈಯ್ಯಲ್ಲಿ ಕೊಟ್ಟು, ಹಳೇ ಸಕಲಾತಿಯನ್ನು ಹೊದ್ದಿಸಿ, ಮೊಣಕಾಲುಗಳ ಮೇಲೆ ನಿಂತು, ಪರಿಹಾಚಕವಾಗಿ ಸೇವಕರು: ಜಾದರ ರಾಯನೇ ನಮಸ್ಕಾರವೆಂದು, ನಿಷ್ಠೂರವಾಗಿ ಜಡಿದರಲ್ಲವೇ? ಪೀಠದ ಮೇಲೆ ಸತ್ ಪ್ರಸಾದದಲ್ಲಿ ನಿಜವಾಗಿರುವಂಥ ನಮ್ಮ ಕರ್ತರಿಗೆ ಕೆಟ್ಟ ಕ್ರೀಸ್ತುವರು ಅಂಥ ಅಪಕಾರ ಅವಮಾನಗಳ ದಿನಂಪ್ರತಿಯೂ ಮಾಡುವದಿಲ್ಲವೋ? ನಿಷ್ಠೂರರು ದೊಡ್ಡ ಮೊಳೆಗಳಿಂದ ಸ್ವಾಮಿಯನ್ನು ಶಿಲುಬೆಯಲ್ಲಿ ಜಡಿದರು.

